ಯಾವುದಕ್ಕೆ ಪ್ರಾಮುಖ್ಯತೆ ಸಿಗಬೇಕೋ ಅದಕ್ಕೆ ಸಿಗದೇ ಇರುವುದು ಆಗುತ್ತಿದೆ. ಬಹುಮುಖ್ಯವಾಗಿ ದೇಶದ ಜನರ ಆಗುಹೋಗುಗಳ ಬಗ್ಗೆ ಆಯವ್ಯಯ ಪತ್ರ ಮಂಡನೆ ಮಾಡಿದ್ದಾರೆ. ಇದರ ಚರ್ಚೆಗೆ ನಮಗೆ ಅವಕಾಶ ಸಿಗುತ್ತಲೇ ಇಲ್ಲ. ಬೇರೆಯದನ್ನು ತರಬಾರದು ಎಂದು ನನ್ನ ಉದ್ದೇಶ ಅಲ್ಲ. ಪ್ರಿಯಾರಿಟಿ ಯಾವುದಕ್ಕೆ ಇರಬೇಕು ಎಂದು ಸರ್ಕಾರ ನಿರ್ಧಾರ ಮಾಡಬೇಕು. ಒಂದು ಕಡೆ ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನಕ್ಕೆ ಇಲ್ಲ, ಮತ್ತೊಂದು ಕಡೆ ಕರ್ನಾಟಕ ರಾಜ್ಯದ ಜನರ ಭವಿಷ್ಯದ ಮೇಲೆ ನಾವು ಚೆಲ್ಲಾಟ ಆಡುತ್ತಿದ್ದೇವೆ. ಆದ್ದರಿಂದ ನನ್ನ ಪ್ರಾರ್ಥನೆ ಎಂದರೆ, ಬಿ.ಎ.ಸಿ. ಪ್ರಕಾರ ನಾವು ವಿತ್ತೀಯ ಕಾರ್ಯಕಲಾಪಗಳನ್ನು ಮೊದಲು ತೆಗೆದುಕೊಳ್ಳೋಣ. ಜನರ ಕೆಲಸವನ್ನು ಮೊದಲು ಮಾಡೋಣ. ಆಮೇಲೆ ಉಳಿದ ವಿಚಾರವನ್ನು ತೆಗೆದುಕೊಳ್ಳಬಹುದು ಎಂದು ನಾನು ತಮಗೆ ಸಲಹೆ ಕೊಡುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಸಚಿವರು): ಮಾನ್ಯ ವಿರೋಧ ಪಕ್ಷದ ನಾಯಕರು ಅವರ ಅಭಿಪ್ರಾಯವನ್ನು ಹೇಳಿದ್ದಾರೆ. ನನ್ನ ಅಭಿಪ್ರಾಯ ಏನೆಂದರೆ, ನಾವು ಮಧ್ಯಾಹ್ನ ಊಟಕ್ಕೋಸ್ಕರ ಬಿಡುತ್ತಿದ್ದೇವಲ್ಲಾ ಅದನ್ನು ನಾವು ಇದನ್ನೆಲ್ಲಾ ಮುಗಿಸುವವರೆಗೆ ಬಂದ್ ಮಾಡಬೇಕು, ಊಟಕ್ಕೆ ಬಿಟ್ಟಾಗ ಊಟ ಮಾಡುವುದಕ್ಕೆ ಹೋದವರು ಮಲಗುತ್ತಾರೆಂದು ಕಾಣುತ್ತದೆ. ನಿಮ್ಮ ಕಡೆ ಇಬ್ಬರಿದ್ದೀರಿ. ನಮ್ಮ ಕಡೆ ಎಷ್ಟು ಇರಬೇಕೋ ಅಷ್ಟು ಜನರಿದ್ದಾರೆ. ಇದಕ್ಕೆ ಔಷಧಿ ಕಂಡುಹಿಡಿಯಬೇಕೇ ಹೊರತು ಕಾನೂನು ಪ್ರಕಾರ ತಿರುವು ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ನನ್ನ ಸಲಹೆ ಏನೆಂದರೆ ಕೋರಂ ಇಲ್ಲದೇ ಹೋದರೆ ಒಂದು ಅರ್ಧ ಗಂಟೆ ಮುಂದೆ ಹೋಗುವುದು ಒಳ್ಳೆಯದೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷರು : ಕೋರಂ ಇದೆ.

ಶ್ರೀ ಬಿ. ಬಸವಲಿಂಗಪ್ಪ : ಇವತ್ತು ಅಜೆಂಡಾ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಇಂದು 4 ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರುತ್ತದೆ. ಅಲ್ಲಿ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕೋ ಆ ರೀತಿ ತೆಗೆದುಕೊಳ್ಳೋಣ. ಮುಂದೆ ಹೋಗಬೇಕೇ ಬೇಡವೇ ಎನ್ನುವ ಬಗ್ಗೆ ವಿಚಾರ ಮಾಡಿ ತೀರ್ಮಾನ ಮಾಡೋಣ. ಆ ತೀರ್ಮಾನ ಮಾಡುವ ಮುಂಚೆ ಏನು ತಮ್ಮ ಮುಂದೆ ಅಜೆಂಡಾ ಇದೆ ಅದರ ಪ್ರಕಾರ ಮಾತನಾಡುವವರಿದ್ದರೆ ಮಾತನಾಡಲಿ ನನಗೆ ಬಹಳ ಸಂತೋಷ.

ಉಪಾಧ್ಯಕ್ಷರು : ಈಗ ಅಜೆಂಡಾ ಪ್ರಕಾರ ಹೋಗೋಣ.

ಶ್ರೀ ಡಿ.ಬಿ. ಚಂದ್ರೇಗೌಡ: ಒಟ್ಟಿನಲ್ಲಿ ಈ ಸರ್ಕಾರದ ಪ್ರಿಯಾರಿಟಿ ಏನೆಂದು ಗೊತ್ತಾಯಿತು.

ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ

ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲೂಕು ಪಂಚಾಯಿತಿ ಸಮಿತಿಗಳು ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳು (ತಿದ್ದುಪಡಿ) ವಿಧೇಯಕ 1991 ಮತ್ತು ಈ ಬಗ್ಗೆ ಹೊರಡಿಸಿರುವ ಅಧ್ಯಾದೇಶವನ್ನು ತಿರಸ್ಕರಿಸಬೇಕೆಂದು ಕೋರಿರುವ ನಿರ್ಣಯದ ಕುರಿತು ಚರ್ಚೆ.

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ): ಸನ್ಮಾನ್ಯ ಉಪಾಧ್ಯಕ್ಷಿಣಿಯರೇ ಈಗಾಗಲೇ ತಾವು ಅಂಗೀಕರಿಸಲ್ಪಟ್ಟ ನಿರ್ಣಯವನ್ನು ಈ ಸಭೆಯ ಮುಂದೆ ಮಂಡಿಸಿದ್ದೇನೆ. ಆ ಮಂಡಿಸಿದಂಥ ನಿರ್ಣಯ ಈ ರೀತಿ ಇದೆ. 1983ನೇ ಇಸವಿಯ ಕರ್ನಾಟಕ ಜಿಲ್ಲಾಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳು ಅಧಿನಿಯಮದ 167ನೇ ಪ್ರಕರಣದ (3)ನೇ

ಉಪಪ್ರಕರಣವನ್ನು ತಿದ್ದುಪಡಿ ಮಾಡಿ ರಾಜ್ಯಪಾಲರು 1ನೇ ಫೆಬ್ರವರಿ 1991ರಂದು ಘೋಷಿಸಿರುವ 1991ನೇ ಇಸವಿಯ ಎರಡನೇ ಕರ್ನಾಟಕ ಅಧ್ಯಾದೇಶಕ್ಕೆ ಈ ಸದನವು ಅಸಮ್ಮತಿ ವ್ಯಕ್ತ ಮಾಡುತ್ತದೆ. ಇದು ನಿರ್ಣಯ.

ಈ ನಿರ್ಣಯವನ್ನು ಮಂಡನೆ ಮಾಡುತ್ತಾ ಈ ನಿರ್ಣಯ ಮಂಡನೆಗೆ ಏನು ಕಾರಣ ಏತಕ್ಕೋಸ್ಕರ ಈ ಒಂದು ನಿರ್ಣಯಕ್ಕೆ ಈ ಸದನ ಒಪ್ಪಿಗೆ ಕೊಡಬೇಕೆಂಬುದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಈಗಾಗಲೇ ತಮಗೆ ತಿಳಿದಿರುವಂತೆ ಯಾವುದೇ ಒಂದು ಸುಗ್ರೀವಾಜ್ಞೆ ಹೊರಡಿಸಬೇಕಾದರೆ ಒಂದು ವಿಶೇಷವಾದ ಒಂದು ಪರಿಸ್ಥಿತಿ ಇರಬೇಕು. ಯಾವ ಒಂದು ಪರಿಸ್ಥಿತಿ ಇರಬೇಕು? ಇಂತಹ ಒಂದು ಅಧ್ಯಾದೇಶವನ್ನು ಹೊರಡಿಸುವುದಕ್ಕೆ ಅತ್ಯಂತ ಜರೂರಾದ ಪರಿಸ್ಥಿತಿ ಇರಬೇಕು. ಅಂತಹ ಒಂದು ಜರೂರು ಪರಿಸ್ಥಿತಿ ಏನಿತ್ತು? ಈಗಾಗಲೇ ಈ ಒಂದು ಅಧ್ಯಾದೇಶದಲ್ಲಿ ಯಾವ ಒಂದು ಉಪ ಪ್ರಕರಣವನ್ನು ತಿದ್ದುಪಡಿ ಮಾಡಬೇಕೆಂಬ ಆಲೋಚನೆ ಸರ್ಕಾರಕ್ಕೆ ಇತ್ತೋ? ಅಂತಹ ಒಂದು ಆಲೋಚನೆಯನ್ನು ಒಳಗೊಂಡ ಒಂದು ವಿಧೇಯಕ ಈಗಾಗಲೇ ಈ ಸದನದ ಮುಂದೆ 1990ನೇ ಇಸವಿ ನವೆಂಬರ್ 22ನೇ ತಾರೀಖು ಈ ಸಭೆಯಲ್ಲಿ ಮಂಡನೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಆವತ್ತು ಸರ್ಕಾರಕ್ಕೆ ಅಂತಹ ಒಂದು ಪರಿಸ್ಥಿತಿ ಇದೆಯೇ ಇಲ್ಲವೇ ಎಂಬುದನ್ನು ಸರ್ಕಾರ ಮನಗಂಡಿತ್ತೇ ಅಥವಾ ಇಲ್ಲವೇ? ಆ ಒಂದು ವಿವರಣೆಯನ್ನು ನಾನು ಬಯಸಿದ್ದೆ. ಅಷ್ಟೇ ಅಲ್ಲ ಆಗ ಮಂಡಿಸಿದ ವಿಧೇಯಕ ಇವತ್ತೂ ಕೂಡ ಈ ಸಭೆಯಮುಂದೆ ಇದೆ. It is a pending Bill ಯಾವ ಒಂದು ವಿಧೇಯಕ ಈಗಾಗಲೇ ಈ ಸಭೆಯ ಮುಂದಿದೆ ಆ ವಿಧೇಯಕ ಕೆಲವು ಪ್ರಕರಣಗಳನ್ನು ಅಥವಾ ಉಪಪ್ರಕರಣಗಳನ್ನು ತಿದ್ದುಪಡಿ ಮಾಡುವಂತಹ ಅವಶ್ಯಕತೆ ಸರಕಾರಕ್ಕೆ ಕಂಡು ಬಂದಿದ್ದರೆ ಅದರ ಬಗ್ಗೆ ವಿವರವಾದಂತಹ ಟಿಪ್ಪಣಿಯನ್ನು ಅವರು ಕೊಡಬೇಕಾಗಿತ್ತು. ನಿನ್ನೆ ದಿವಸ ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೂ ಮಾನ್ಯ ಸಭಾಧ್ಯಕ್ಷರು ಕೊಟ್ಟಂತಹ ನಿರ್ಣಯ ಏನು ಇದೆ ಆ ನಿರ್ಣಯದ ಪ್ರಕಾರ ಈಗಾಗಲೇ ನಮ್ಮ ನಿಯಮಾವಳಿ 79 (1) ರ ಪ್ರಕಾರ ಯಾವ ಒಂದು ವಿವರಣಾತ್ಮಕವಾದ ಹೇಳಿಕೆಯನ್ನು ನೀಡಿದ್ದಾರೆ ಆ ಒಂದು ಹೇಳಿಕೆಯಲ್ಲಿ ಹೇಳಿರುವಂತಹ ವಿಚಾರಗಳು ಸಹ ಈ ಒಂದು ವಿವರಣಾತ್ಮಕ ವಾದ ಹೇಳಿಕೆ ಎಂಬುದಾಗಿ ಭಾವಿಸಬಹುದೆಂದು ಹೇಳಿದ್ದಾರೆ. ಆದ್ದರಿಂದ ವಿವರಣಾತ್ಮಕವಾದ ವಿವರಣೆಯಲ್ಲಿ ಹೇಳಿರುವುದನ್ನು ನಾನು ಇಲ್ಲಿ ಮೊದಲು ಪ್ರಸ್ತಾಪ ಮಾಡುತ್ತೇನೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪದಚ್ಯುತಿಗೆ ಇರಬೇಕಾದ ಮೂರನೇ ಎರಡರಷ್ಟರ ಬಹುಮತದ ಪ್ರಸಕ್ತ ಉಪಬಂಧವು ಕೆಲವು ಜಿಲ್ಲಾಪರಿಷತ್ತುಗಳ ಕಾರ್ಯಕಲಾಪಗಳ ನಿರ್ವಹಣೆಯಲ್ಲಿ ತುಂಬಾ ತೊಂದರೆಗಳನ್ನುಂಟು ಮಾಡಿದೆ. ಏಕೆಂದರೆ ಚುನಾಯಿತ ಪ್ರಧಾನ ಕಾರ್ಯನಿರ್ವಾಹಕರಾಗಿರುವ, ಆದರೆ ಸರಳ ಬಹುಮತವನ್ನೂ ಪಡೆಯದಿರುವ ಅಧ್ಯಕ್ಷರು ಸರಳ ಬಹುಮತದ ಅಗತ್ಯವಿರುವ ತೀರ್ಮಾನಗಳು ಅಥವಾ ಪ್ರಸ್ತಾವಗಳಿಗೆ ಜಿಲ್ಲಾಪರಿಷತ್ತುಗಳಿಂದ ಅನುಸಮರ್ಥನೆ ಅಥವಾ ಅನುಮೋದನೆ ಪಡೆಯಲು ಅಸಮರ್ಥರಾಗಿದ್ದಾರೆ. ಅಲ್ಲದೆ ಅಂತಹ ಅಧ್ಯಕ್ಷರನ್ನು ಅವರ ಸ್ಥಾನದಿಂದ ತೆಗೆದು ಹಾಕುವಂತಿಲ್ಲ. ಏಕೆಂದರೆ 1991ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2 ಅನ್ನು ಹೊರಡಿಸುವುದಕ್ಕೆ ಮುಂಚೆ ಅವರನ್ನು ತೆಗೆದುಹಾಕಲು ಕನಿಷ್ಠ ಪಕ್ಷ 3ನೇ ಎರಡರಷ್ಟರ ಬಹುಮತವನ್ನು ಆಗತ್ಯ ಪಡಿಸಲಾಗುತ್ತಿತ್ತು. ಅಂತಹ ಅಸಂಗತ ಸನ್ನಿವೇಶಗಳನ್ನು ತಡೆಯುವ ದೃಷ್ಟಿಯಿಂದ ಮತ್ತು ಜಿಲ್ಲಾಪರಿಷತ್ತಿನ ಪರಿಣಾಮಕಾರಿ ಕಾರ್ಯನಿರ್ವಹಣೆಯ ದೃಷ್ಟಿಯಿಂದ 1991ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2 ಅನ್ನು ದಿನಾಂಕ 1-2-91ನೇ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಹೊರಡಿಸಿ ಸರಳ ಬಹುಮತದ ಅಗತ್ಯವನ್ನು

ಉಪಪ್ರಕರಣವನ್ನು ತಿದ್ದುಪಡಿ ಮಾಡಿ ರಾಜ್ಯಪಾಲರು 1ನೇ ಫೆಬ್ರವರಿ 1991ರಂದು ಘೋಷಿಸಿರುವ 1991ನೇ ಇಸವಿಯ ಎರಡನೇ ಕರ್ನಾಟಕ ಅಧ್ಯಾದೇಶಕ್ಕೆ ಈ ಸದನವು ಅಸಮ್ಮತಿ ವ್ಯಕ್ತ ಮಾಡುತ್ತದೆ. ಇದು ನಿರ್ಣಯ.

ಈ ನಿರ್ಣಯವನ್ನು ಮಂಡನೆ ಮಾಡುತ್ತಾ ಈ ನಿರ್ಣಯ ಮಂಡನೆಗೆ ಏನು ಕಾರಣ ಏತಕ್ಕೋಸ್ಕರ ಈ ಒಂದು ನಿರ್ಣಯಕ್ಕೆ ಈ ಸದನ ಒಪ್ಪಿಗೆ ಕೊಡಬೇಕೆಂಬುದರ ಬಗ್ಗೆ ಕೆಲವು ವಿಚಾರಗಳನ್ನು ನಾನು ಪ್ರಸ್ತಾಪಿಸುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಈಗಾಗಲೇ ತಮಗೆ ತಿಳಿದಿರುವಂತೆ ಯಾವುದೇ ಒಂದು ಸುಗ್ರೀವಾಜ್ಞೆ ಹೊರಡಿಸಬೇಕಾದರೆ ಒಂದು ವಿಶೇಷವಾದ ಒಂದು ಪರಿಸ್ಥಿತಿ ಇರಬೇಕು. ಯಾವ ಒಂದು ಪರಿಸ್ಥಿತಿ ಇರಬೇಕು? ಇಂತಹ ಒಂದು ಅಧ್ಯಾದೇಶವನ್ನು ಹೊರಡಿಸುವುದಕ್ಕೆ ಅತ್ಯಂತ ಜರೂರಾದ ಪರಿಸ್ಥಿತಿ ಇರಬೇಕು. ಅಂತಹ ಒಂದು ಜರೂರು ಪರಿಸ್ಥಿತಿ ಏನಿತ್ತು? ಈಗಾಗಲೇ ಈ ಒಂದು ಅಧ್ಯಾದೇಶದಲ್ಲಿ ಯಾವ ಒಂದು ಉಪ ಪ್ರಕರಣವನ್ನು ತಿದ್ದುಪಡಿ ಮಾಡಬೇಕೆಂಬ ಆಲೋಚನೆ ಸರ್ಕಾರಕ್ಕೆ ಇತ್ತೋ? ಅಂತಹ ಒಂದು ಆಲೋಚನೆಯನ್ನು ಒಳಗೊಂಡ ಒಂದು ವಿಧೇಯಕ ಈಗಾಗಲೇ ಈ ಸದನದ ಮುಂದೆ 1990ನೇ ಇಸವಿ ನವೆಂಬರ್ 22ನೇ ತಾರೀಖು ಈ ಸಭೆಯಲ್ಲಿ ಮಂಡನೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಆವತ್ತು ಸರ್ಕಾರಕ್ಕೆ ಅಂತಹ ಒಂದು ಪರಿಸ್ಥಿತಿ ಇದೆಯೇ ಇಲ್ಲವೇ ಎಂಬುದನ್ನು ಸರ್ಕಾರ ಮನಗಂಡಿತ್ತೇ ಅಥವಾ ಇಲ್ಲವೇ? ಆ ಒಂದು ವಿವರಣೆಯನ್ನು ನಾನು ಬಯಸಿದ್ದೆ. ಅಷ್ಟೇ ಅಲ್ಲ ಆಗ ಮಂಡಿಸಿದ ವಿಧೇಯಕ ಇವತ್ತೂ ಕೂಡ ಈ ಸಭೆಯಮುಂದೆ ಇದೆ. It is a pending Bill ಯಾವ ಒಂದು ವಿಧೇಯಕ ಈಗಾಗಲೇ ಈ ಸಭೆಯ ಮುಂದಿದೆ ಆ ವಿಧೇಯಕ ಕೆಲವು ಪ್ರಕರಣಗಳನ್ನು ಅಥವಾ ಉಪಪ್ರಕರಣಗಳನ್ನು ತಿದ್ದುಪಡಿ ಮಾಡುವಂತಹ ಅವಶ್ಯಕತೆ ಸರಕಾರಕ್ಕೆ ಕಂಡು ಬಂದಿದ್ದರೆ ಅದರ ಬಗ್ಗೆ ವಿವರವಾದಂತಹ ಟಿಪ್ಪಣಿಯನ್ನು ಅವರು ಕೊಡಬೇಕಾಗಿತ್ತು. ನಿನ್ನೆ ದಿವಸ ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಆದರೂ ಮಾನ್ಯ ಸಭಾಧ್ಯಕ್ಷರು ಕೊಟ್ಟಂತಹ ನಿರ್ಣಯ ಏನು ಇದೆ ಆ ನಿರ್ಣಯದ ಪ್ರಕಾರ ಈಗಾಗಲೇ ನಮ್ಮ ನಿಯಮಾವಳಿ 79 (1) ರ ಪ್ರಕಾರ ಯಾವ ಒಂದು ವಿವರಣಾತ್ಮಕವಾದ ಹೇಳಿಕೆಯನ್ನು ನೀಡಿದ್ದಾರೆ ಆ ಒಂದು ಹೇಳಿಕೆಯಲ್ಲಿ ಹೇಳಿರುವಂತಹ ವಿಚಾರಗಳು ಸಹ ಈ ಒಂದು ವಿವರಣಾತ್ಮಕ ವಾದ ಹೇಳಿಕೆ ಎಂಬುದಾಗಿ ಭಾವಿಸಬಹುದೆಂದು ಹೇಳಿದ್ದಾರೆ. ಆದ್ದರಿಂದ ವಿವರಣಾತ್ಮಕವಾದ ವಿವರಣೆಯಲ್ಲಿ ಹೇಳಿರುವುದನ್ನು ನಾನು ಇಲ್ಲಿ ಮೊದಲು ಪ್ರಸ್ತಾಪ ಮಾಡುತ್ತೇನೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪದಚ್ಯುತಿಗೆ ಇರಬೇಕಾದ ಮೂರನೇ ಎರಡರಷ್ಟರ ಬಹುಮತದ ಪ್ರಸಕ್ತ ಉಪಬಂಧವು ಕೆಲವು ಜಿಲ್ಲಾಪರಿಷತ್ತುಗಳ ಕಾರ್ಯಕಲಾಪಗಳ ನಿರ್ವಹಣೆಯಲ್ಲಿ ತುಂಬಾ ತೊಂದರೆಗಳನ್ನುಂಟು ಮಾಡಿದೆ. ಏಕೆಂದರೆ ಚುನಾಯಿತ ಪ್ರಧಾನ ಕಾರ್ಯನಿರ್ವಾಹಕರಾಗಿರುವ, ಆದರೆ ಸರಳ ಬಹುಮತವನ್ನೂ ಪಡೆಯದಿರುವ ಅಧ್ಯಕ್ಷರು ಸರಳ ಬಹುಮತದ ಅಗತ್ಯವಿರುವ ತೀರ್ಮಾನಗಳು ಅಥವಾ ಪ್ರಸ್ತಾವಗಳಿಗೆ ಜಿಲ್ಲಾಪರಿಷತ್ತುಗಳಿಂದ ಅನುಸಮರ್ಥನೆ ಅಥವಾ ಅನುಮೋದನೆ ಪಡೆಯಲು ಅಸಮರ್ಥರಾಗಿದ್ದಾರೆ. ಅಲ್ಲದೆ ಅಂತಹ ಅಧ್ಯಕ್ಷರನ್ನು ಅವರ ಸ್ಥಾನದಿಂದ ತೆಗೆದು ಹಾಕುವಂತಿಲ್ಲ. ಏಕೆಂದರೆ 1991ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2 ಅನ್ನು ಹೊರಡಿಸುವುದಕ್ಕೆ ಮುಂಚೆ ಅವರನ್ನು ತೆಗೆದುಹಾಕಲು ಕನಿಷ್ಠ ಪಕ್ಷ 3ನೇ ಎರಡರಷ್ಟರ ಬಹುಮತವನ್ನು ಆಗತ್ಯ ಪಡಿಸಲಾಗುತ್ತಿತ್ತು. ಅಂತಹ ಅಸಂಗತ ಸನ್ನಿವೇಶಗಳನ್ನು ತಡೆಯುವ ದೃಷ್ಟಿಯಿಂದ ಮತ್ತು ಜಿಲ್ಲಾಪರಿಷತ್ತಿನ ಪರಿಣಾಮಕಾರಿ ಕಾರ್ಯನಿರ್ವಹಣೆಯ ದೃಷ್ಟಿಯಿಂದ 1991ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 2 ಅನ್ನು ದಿನಾಂಕ 1-2-91ನೇ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಹೊರಡಿಸಿ ಸರಳ ಬಹುಮತದ ಅಗತ್ಯವನ್ನು

"A comprehensive Bill to amend the Zilla Parishats and Mandal Panchayats Act is being introduced in the ensuring Budget session of the Legislature according to the Chief Minister Sri S.Bangarappa. He told newsmen here on Sunday that the new bill would be based on the 64th Constitutional Amendment Bill.. ಎಂದು

ಆದ್ದರಿಂದ ಇದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮತ್ತೆ ಮುಂದೆ ಹೇಳುತ್ತಾರೆ.:

"there would be no devistion from the 64th Constitutional Amendment Bill he added".

ಈ ಒಂದು ಹೇಳಿಕೆಯನ್ನು ಸರ್ಕಾರದ ಮುಖ್ಯಸ್ಥರಾಗಿ ಏನು ಹೇಳಿದ್ದಿರಿ ಈ ಹೇಳಿಕೆಗೆ ತದ್ವಿರುದ್ಧವಾಗಿ ತಾವೇನಾದರೂ ನಡೆದುಕೊಂಡಿದ್ದೀರಾ ಎಂಬುದನ್ನು ಬಯಲಿಗೆಳೆಯುವುದಕ್ಕೋಸ್ಕರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇಷ್ಟೆ ಅಲ್ಲ ಡೆಲ್ಲಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಹೇಳಿಕೆಯನ್ನು ಕೊಟ್ಟರು. ಏನೆಂದರೆ,

"The Karnataka Chief Minister, Sri Bangarappa today said, the proposed amendments to the Zilla Parishats Bill could be modified before the forthcoming Budget Session. Mr. Bangarappa who met the Congress-I President Sri Rajiv Gandhi this evening to discuss the controversy arising out ot the proposed amendment, said the modification would be on the lines of 64th Amendment Bill" ಎಂದು

ಸಾಕೇನು ಸ್ವಾಮಿ? ಇನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಹೇಳುವುದಿಲ್ಲ. ಈ ಒಂದು ಹೇಳಿಕೆ, ಏನಿದೆ, ಈ ವರದಿಯನ್ನು ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ನಿರಾಕರಿಸಿಲ್ಲ, ಹೌದಾ? ಆದೇ ರೀತಿ ಇನ್ನೊಂದು ಮಾತನ್ನು ಈ ಸರ್ಕಾರದ ಮಂತ್ರಿಮಹೋದಯರೊಬ್ಬರು ಹೇಳಿದ್ದಾರೆ. ಅದು ನಮಗೂ ನಿಮಗೂ ಈ ಸರ್ಕಾರದ ಸಹಾಯ ಮಾಡಬಹುದು ಏನೆಂದರೆ,

"Speaking to newsmen, he said the experience gained in the past four years on the working of the Zilla Parishats and Mandal Panchayats needed to be incorpoated in the Bill. Our Party is the only party which has totally believed in the Decentralisation. We do not believe in adhocism to suit the convanience of the temporary phenomenon.."

ನಾನು ಹೇಳುತ್ತೇನೆ ಏನು ಈ ಮಾನ್ಯ ಮಂತ್ರಿಗಳು ಅಥವಾ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಇವರು ನಿಜವಾಗಿಯೂ ಸಹ ಈ ಒಂದು ತತ್ವದಲ್ಲಿ ನಂಬಿಕೆ ಇಟ್ಟುಕೊಂಡು ಈ ಮಾತನ್ನು ಹೇಳಿದ್ದಾರೆಯೆ? ಅಥವಾ ಈ ದೇಶದ ಜನರನ್ನು ಹೋಸ ಮಾಡಲಿಕ್ಕೆ ಅಥವಾ ತಪ್ಪು ದಾರಿಗೆ ಎಳೆಯುವಂಥ ಉದ್ದೇಶದಿಂದ ಈ ಮಾತನ್ನು ಹೇಳಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಇವತ್ತಿನ ದಿವಸ ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಾದರೆ, 1989ನೇ 64ನೇ ರಾಜ್ಯಂಗದ ತಿದ್ದುಪಡಿ ವಿಧೇಯಕ ಏನಿದೆ ವಿಧಿಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಏಕೆಂದರೆ ನಿಮ್ಮ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ನಾವು 64ನೇ ವಿಧೆಯಕದ ವಿಧಿಗಳಿಗೆ ವಿರುದ್ಧವಾಗಿ ತಿದ್ದುಪಡಿ

"A comprehensive Bill to amend the Zilla Parishats and Mandal Panchayats Act is being introduced in the ensuring Budget session of the Legislature according to the Chief Minister Sri S.Bangarappa. He told newsmen here on Sunday that the new bill would be based on the 64th Constitutional Amendment Bill.. ಎಂದು

ಆದ್ದರಿಂದ ಇದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮತ್ತೆ ಮುಂದೆ ಹೇಳುತ್ತಾರೆ.:

"there would be no devistion from the 64th Constitutional Amendment Bill he added".

ಈ ಒಂದು ಹೇಳಿಕೆಯನ್ನು ಸರ್ಕಾರದ ಮುಖ್ಯಸ್ಥರಾಗಿ ಏನು ಹೇಳಿದ್ದಿರಿ ಈ ಹೇಳಿಕೆಗೆ ತದ್ವಿರುದ್ಧವಾಗಿ ತಾವೇನಾದರೂ ನಡೆದುಕೊಂಡಿದ್ದೀರಾ ಎಂಬುದನ್ನು ಬಯಲಿಗೆಳೆಯುವುದಕ್ಕೋಸ್ಕರವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಇಷ್ಟೆ ಅಲ್ಲ ಡೆಲ್ಲಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಹೇಳಿಕೆಯನ್ನು ಕೊಟ್ಟರು. ಏನೆಂದರೆ,

"The Karnataka Chief Minister, Sri Bangarappa today said, the proposed amendments to the Zilla Parishats Bill could be modified before the forthcoming Budget Session. Mr. Bangarappa who met the Congress-I President Sri Rajiv Gandhi this evening to discuss the controversy arising out ot the proposed amendment, said the modification would be on the lines of 64th Amendment Bill" ಎಂದು

ಸಾಕೇನು ಸ್ವಾಮಿ? ಇನ್ನು ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಹೇಳುವುದಿಲ್ಲ. ಈ ಒಂದು ಹೇಳಿಕೆ, ಏನಿದೆ, ಈ ವರದಿಯನ್ನು ಇಲ್ಲಿಯವರೆಗೂ ಮಾನ್ಯ ಮುಖ್ಯಮಂತ್ರಿಗಳು ನಿರಾಕರಿಸಿಲ್ಲ, ಹೌದಾ? ಆದೇ ರೀತಿ ಇನ್ನೊಂದು ಮಾತನ್ನು ಈ ಸರ್ಕಾರದ ಮಂತ್ರಿಮಹೋದಯರೊಬ್ಬರು ಹೇಳಿದ್ದಾರೆ. ಅದು ನಮಗೂ ನಿಮಗೂ ಈ ಸರ್ಕಾರದ ಸಹಾಯ ಮಾಡಬಹುದು ಏನೆಂದರೆ,

"Speaking to newsmen, he said the experience gained in the past four years on the working of the Zilla Parishats and Mandal Panchayats needed to be incorpoated in the Bill. Our Party is the only party which has totally believed in the Decentralisation. We do not believe in adhocism to suit the convanience of the temporary phenomenon.."

ನಾನು ಹೇಳುತ್ತೇನೆ ಏನು ಈ ಮಾನ್ಯ ಮಂತ್ರಿಗಳು ಅಥವಾ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಇವರು ನಿಜವಾಗಿಯೂ ಸಹ ಈ ಒಂದು ತತ್ವದಲ್ಲಿ ನಂಬಿಕೆ ಇಟ್ಟುಕೊಂಡು ಈ ಮಾತನ್ನು ಹೇಳಿದ್ದಾರೆಯೆ? ಅಥವಾ ಈ ದೇಶದ ಜನರನ್ನು ಹೋಸ ಮಾಡಲಿಕ್ಕೆ ಅಥವಾ ತಪ್ಪು ದಾರಿಗೆ ಎಳೆಯುವಂಥ ಉದ್ದೇಶದಿಂದ ಈ ಮಾತನ್ನು ಹೇಳಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ ಇವತ್ತಿನ ದಿವಸ ಈ ವಿಧೇಯಕಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಾದರೆ, 1989ನೇ 64ನೇ ರಾಜ್ಯಂಗದ ತಿದ್ದುಪಡಿ ವಿಧೇಯಕ ಏನಿದೆ ವಿಧಿಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಏಕೆಂದರೆ ನಿಮ್ಮ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ನಾವು 64ನೇ ವಿಧೆಯಕದ ವಿಧಿಗಳಿಗೆ ವಿರುದ್ಧವಾಗಿ ತಿದ್ದುಪಡಿ

ತರುವುದಿಲ್ಲವೆಂದು ಹೇಳಿ, ಇವತ್ತಿನ ದಿವಸ ಅದಕ್ಕೆ ವಿರುದ್ಧವಾಗಿ ತಿದ್ದುಪಡಿಗಳನ್ನು ಇಲ್ಲಿ ತರುವುದಾದರೆ, ಏತಕ್ಕೋಸ್ಕರ ಬೇರೆ ಎನ್ನುವುದು ಬಗ್ಗೆ ತಾವು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ: ಶ್ರೀಮಾನ್ ಏಕಾಂತಯ್ಯನವರು ಹೇಳುವುದನ್ನು ನಾವೇನು ಅಲ್ಲಗಳೆಯುತ್ತಾ ಇಲ್ಲ ಆದರೆ ನಾವು ಕಾಂಪ್ರಹೆನ್ಸಿವ್ ಬಿಲ್ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇವತ್ತು ಅಥವಾ ನಾಳೆ ಅದು ಬರುತ್ತದೆ, ಅದಕ್ಕೆ ನಾವು ಹಿಂದೆ ಹೋಗುತ್ತಾ ಇಲ್ಲ ಈಗ ಇರಕ್ಕಂಥ ಪ್ರಶ್ನೆ ನಾವು ನಡೆಸಬೇಕು ಸರ್ಕಾರ ನಡೆಸುವುದಕ್ಕೆ ಜಿಲ್ಲಾ ಪರಿಷತ್ತಿನಿಂದ ನಮಗೆ ಆಗುತ್ತಾ ಇಲ್ಲ, ಕಾರ್ಯಕ್ರಮಗಳನ್ನು ಜಾರಿಗೆ ಕೊಡಲು ಸಾಧ್ಯವಾಗುತ್ತಿಲ್ಲ ಜಿಲ್ಲಾ ಪರಿಷತ್‌ಗಳಲ್ಲಿ, ಹೋದ ಚುನಾವಣೆ ಆದ ನಂತರ, ನಮಗೆ ದ್ವಂದ್ವ ಪರಿಸ್ಥಿತಿ ಉಂಟಾಗಿಧೆ ಆದ್ದರಿಂದ ಈ ಸಿಂಪಲ್ ಮೆಜಾರಿಟಿಯಿಂದ ನಾವು ಕೆಲಸ ಮಾಡಬೇಕೆಂದು ಮಾಡುತ್ತಾ ಇದ್ದೇವೆ. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಕಡೆಗೂ ಸಿಂಪಲ್ ಮೆಜಾರಿಟಿ ಇದೆ. ಪ್ರೊ. ನಂಜುಂಡಸ್ವಾಮಿಯವರು ಹೇಳಿದ್ದಾರೆ ಪುನಃ ನಾನು ಹೇಳಬೇಕಾಗಿಲ್ಲ. ಸಿಂಪಲ್ ಮೆಜಾರಿಟಿ ತೆಗೆಯಬೇಕೆಂದು ಇದರಲ್ಲಿ ಏನಾದರೂ ಇದ್ದರೆ ನೋ ಕಾನ್‌ಫಿಡೆನ್ಸ್ ಅಂದರೆ ನಂಬಿಕೆ ಹೋದರೆ ಮಾತ್ರ ಮಾಡಬೇಕೆಂದು ಪ್ರಯತ್ನ ಇದೆ. ಇಷ್ಟಕ್ಕೆ ಸೀಮಿತವಾಗಿ ಮಾತನಾಡಿದರೆ ಸಾಕು. ಅದು ಬಿಟ್ಟು ಎಲ್ಲಾ ಜಿಲ್ಲಾಪರಿಷತ್ ಮಸೂದೆ ಮೇಲೆ ಭಾಷಣ ಮಾಡುವುದಕ್ಕೆ ಹೋದರೆ....

ಶ್ರೀ ಹೆಚ್. ಏಕಾಂತಯ್ಯ: ನಾನು ಮಸೂದೆ ಮೇಲೆ ಭಾಷಣ ಮಾಡುತ್ತಾ ಇಲ್ಲ ಈ ತಿದ್ದುಪಡಿ ವಿಧೇಯಕದಲ್ಲಿ ತಾವು ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ ಆ ವಿಚಾರಗಳಿಗೆ ಸಂಬಂಧಪಟ್ಟಂತೆ ಮತ್ತು ರಾಜ್ಯಂಗದ 64ನೇ ತಿದ್ದುಪಡಿ ವಿಧೇಯಕ ಏನಿದೆ ಇದರಲ್ಲಿ ತಾವು ಏನು ಹೇಳಿದಿರಿ ತಾವು ಹೇಳಬೇಕಾಗಿತ್ತು. ಇಲ್ಲ 64ನೇ ತಿದ್ದುಪಡಿ ನಮಗೆ ಇಷ್ಟವಿಲ್ಲ, ಇದಕ್ಕೆ ನಾವು ಒಪ್ಪುವುದಿಲ್ಲ, ನಮ್ಮ ಸರ್ಕಾರ ವಿರೋಧವಾಗಿದ್ದರೂ ಪರವಾಗಿಲ್ಲ ಇವತ್ತಿನ ದಿವಸ ನಾವು ಮಾಡುತ್ತೇವೆ ಎನ್ನುವ ಮಾತನ್ನು ತಾವು ಹೇಳಲಿಲ್ಲ ಅದಕ್ಕೆ ನಾನು ಪ್ರಸ್ತಾವಿಕವಾಗಿ ಹೇಳಿದೆ. ನವದೆಹಲಿಯಲ್ಲಿ ಮತ್ತು ಬೆಂಗಳೂರಿನಲ್ಲಿ ಸರ್ಕಾರದ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ ಹಾಗೂ ಮತ್ತೊಬ್ಬ ಮಂತ್ರಿಮಹೋದಯರು ಏನು ಹೇಳಿದ್ದಾರೆಂದರೆ "It is the only Party Congress-I) which is totally for decentralisation. We do not believe in adhocism."

ಶ್ರೀ ಕೆ.ಹೆಚ್. ರಂಗನಾಥ್: ಮೊದಲಿನಿಂದಲೂ ಕಾಗ್ರೆಸ್‌ನಲ್ಲಿ ದೀ ಸೆಂಟ್ರಲೈಸೇಷನ್ ಇದೆ. ನೆಹರೂ ಅವರ ಕಾಲದಿಂದಲೂ ಡೀಸೆಂಟ್ರಲೈಸೇಷನ್ ಇದೆ, ಇದೇನು ಹೊಸದಲ್ಲ ಅದಕ್ಕೋಸ್ಕರ ಹೇಳಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಕೆ.ಹೆಚ್. ರಂಗಸಾಥ್‌ರವರು ಏನು ಹೇಳಿದ್ದಾರೆ ಅದಕ್ಕೆ ನಂತರ ಬರುತ್ತೇನೆ. ರಾಜ್ಯಾಂಗದ 40ನೇ ವಿಧಿಯಲ್ಲಿ ಹೇಳಿರುವಂತೆ ಸ್ಥಳೀಯ ಸರ್ಕಾರದ ಸ್ಥಾಪನೆ ಮಾಡುವುದಕ್ಕೆ ಅಥವಾ ಗ್ರಾಮಗಳನ್ನು ರಿಪಬ್ಲಿಕ್ ಎಂದು ಪರಿಗಣಿಸಿ ಹೊಸ ಒಂದು ವ್ಯವಸ್ಥೆಯನ್ನು ತರಬೇಕೆಂದು ಹಿಂದೆ ತೀರ್ಮಾನ ಮಾಡಿದ್ದೆವು ಅದು ಆಗಲಿಲ್ಲ ಇವತ್ತಿನ ದಿವಸ ತಾವು ಸ್ಥಳೀಯ ಸರ್ಕಾರವನ್ನು ಸ್ಥಾಪನೆ ಮಾಡುವುದಕ್ಕೆ ಅದಕ್ಕೆ ಬೇಕಾದ ಅಧಿಕಾರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೀರಿ. ನಾನು ಆ ವಿಷಯಕ್ಕೆ ಬರುವುದಕ್ಕೆ ಮುಂಚೆ ಮಾನ್ಯ ಬಸವಲಿಂಗಪ್ಪನವರು ಏನು ಹೇಳಿದರು, "It is the only Party (Congress-I) which is totally for decentralisaton. We do not believe in adhocism." I would like to know whether he believes is adhocism?.

ಉಪಾಧ್ಯಕ್ಷರು: ತಾವು ಬೇಗ ಮುಗಿಸಿ, ಅನಂತರ ಅವರು ಮಾತನಾಡುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ: ನಾನು ಅಷ್ಟು ಬೇಗ ಮುಗಿಸುವುದಕ್ಕಾಗುವುದಿಲ್ಲ ನನ್ನ ಖಾಸಗೀ ನಿರ್ಣಯದ ಮೇಲೆ ಪೂರ್ಣವಾಗಿ ಹೇಳಬೇಕಾಗುತ್ತದೆ. ಇಲ್ಲಿ ಬಹಳ ಜನ ಸದಸ್ಯರು ಇದ್ದಾರೆ. ನನ್ನ ಅಭಿಪ್ರಾಯಕ್ಕೆ ವಿರುದ್ಧವಾದ ಸದಸ್ಯರ ಸಂಖ್ಯೆ ಬಹಳ ಹೆಚ್ಚಾಗಿರುವುದರಿಂದ, ಅವರ ಮನ ಒಲಿಸುವುದಕ್ಕೆ ನನಗೆ ಹೆಚ್ಚು ಕಾಲಾವಕಾಶ ಕೊಡಬೇಕಾಗುತ್ತದೆ. ಕಡಿಮೇ ಸಂಖ್ಯೆ ಇದ್ದಿದ್ದರೆ ಆ ಮಾತು ಬೇರೆಯಾಗುತ್ತಿತ್ತು.

ಶ್ರೀ ಗೋಪಿನಾಥ್ ಸಾಂಡ್ರ: ನೀವು, ನಿಮ್ಮದ್ದೇ ಹೆಚ್ಚು ಎಂದು ಹೇಳಿಕೊಳ್ಳಬೇಡಿ ನಿಮ್ಮದ್ದನ್ನು ಹೇಳಿ ಬೇಗನೆ ನಿಲ್ಲಿಸಿಬಿಡಿ.

ಉಪಾಧ್ಯಕ್ಷರು: ಮಧ್ಯೆ ಮಧ್ಯೆ ಯಾರೂ ಸಹ ಮಾತನಾಡಬೇಡಿ. ಅವರು ಜಾಗ್ರತೆ ಮುಗಿಸುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ: ಯಾರೇ ಅಡ್ಡಿ ಮಾಡಿದರೂ ಪರವಾಗಿಲ್ಲ ಆದರೆ ಮಾನ್ಯ ಬಸವಲಿಂಗಪ್ಪವರೇ ಅಡ್ಡಿಮಾಡಿದರೆ ಸ್ವಲ್ಪ ಕಷ್ಟವಾಗುತ್ತದೆ.

ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ: ಇವತ್ತಿನ ದಿವಸ ನಾನು ಹೇಳುವುದು ಏನೆಂದರೆ ಯಾವ ಒಂದು ತತ್ವವನ್ನು ಅವರು ಪ್ರತಿಪಾದನೆ ಮಾಡುತ್ತಾರೆ. ನಮಗೆ ಬಹಳ ನಿಷ್ಠೆ ಇದೆ ಎಂದು ಹೇಳಿ ಬಹಳ ಎತ್ತರವಾದ ಧ್ವನಿಯಲ್ಲಿ ಬಹಳ ಜೋರಾಗಿ ಘೋಷಣೆ ಕೂಗುತ್ತಾರೆ. ಆ ಜನ ಅಷ್ಟೇ ಕೆಳಮಟ್ಟದಲ್ಲಿ ಬಹಳ ಸಣ್ಣದಾಗಿ ಆಲೋಚನೆ ಮಾಡುತ್ತಾರೆ ಎಂಬುದನ್ನು ತಾವು ಮರೆಯಬಾರದು. ಇವತ್ತಿನ ದಿವಸ ಅವರು ನಮ್ಮ ಪಕ್ಷ ಒಂದೇ ವಿಕೇಂದ್ರಿಕರಣಕ್ಕೆ ಬದ್ಧ ಎಂದು ಹೇಳಿದರು. ಕೇವಲ ಅನುಕೂಲಕ್ಕೋಸ್ಕರವಾಗಿ ಅವಕಾಶವಾದಿ ನೀತಿಯನ್ನು ನಾವು ಅನುಸರಿಸುವುದಿಲ್ಲ ಎಂಬ ಮಾತನ್ನು ಹೇಳಿದರು. ಆದರೆ ಇವತ್ತಿನ ದಿವಸ ಇವರು ಅನುಸರಿಸುವ ನೀತಿ ಅವಕಾಶವಾದಿ ನೀತಿಯೇ ಅಥವಾ ಅಲ್ಲವೇ ಎಂಬುದನ್ನು ಬಹಿರಂಗಗೊಳಿಸುವುದಕ್ಕಾಗಿ ಅವರ ಸತ್ಯವನ್ನು ನಗ್ನಗೊಳಿಸುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ. ತಪ್ಪುಗಳನ್ನು ಹೇಳುವುದು ಬಹಳ ಸುಲಭ ಈ ದೇಶದಲ್ಲಿ ಮೊದಲಿನಿಂದಲೂ ಸಹ ಒಂದು ಪರಿಪಾಠವನ್ನು ಬೆಳೆಸಿಕೊಂಡು ಬಂದಿದ್ದೇವೆ. ನಿಮ್ಮ ಹೇಳಿಕೆಯಲ್ಲಿ ಹಾಗೂ ನೀತಿಯಲ್ಲಿ ವಿಶೇಷವಾದ ಅಂತರ ಇದ್ದರೆ ಜನ ನಿಮ್ಮನ್ನೂ ಮೆಚ್ಚುವುದಕ್ಕೆ ಸಾಧ್ಯವಿಲ್ಲ, ನಮ್ಮನ್ನಾದರೂ ಮೆಚ್ಚುವುದಕ್ಕೆ ಸಾಧ್ಯ ಇಲ್ಲ. ಆದುದರಿಂದ ಇವರು ಹೇಳುವಂತಹ ಹೇಳಿಕೆಯಲ್ಲಿ ಯಾವ ಒಂದು ನೀತಿಯನ್ನು ಅನುಸರಿಸುತ್ತೇವೆ ಎಂದು ಹೇಳಿದರು ಯಾವ ಒಂದು ನಿಷ್ಠೆ ನಮಗೆ ಇದೆ ಎಂಬ ಮಾತನ್ನು ಹೇಳಿದರು, ಆ ನೀತಿಯನ್ನು ನಿಷ್ಠೆಯನ್ನು ಇವರು ಗಾಳಿಗೆ ತೂರಿದ್ದಾರೆ. ಇವರಿಗೆ ಬೇಕಾಗಿರುವುದು ಅಧಿಕಾರ ಈ ದೇಶದಲ್ಲಿ ಒಂದು ಪ್ರವೃತ್ತಿ ಬೆಳೆದು ಬಂದಿದೆ. ಅಧಿಕಾರದಲ್ಲಿರುವ ಜನ ಏನೇ ಆಗಲೀ ಅಧಿಕಾರದಲ್ಲಿ ಉಳಿಯುವುದಕ್ಕೆ ಏನು ಬೇಕಾದರೂ ಮಾಡುವುದಕ್ಕೆ ತಯಾರಾಗಿದ್ದೇವೆಂದು ಮಾತನ್ನು ಹೇಳಿದರೆ ಆ ರೀತಿ ನಡೆದುಕೊಳ್ಳುವ ಪ್ರವೃತ್ತಿ ಈ ದೇಶದಲ್ಲಿದೆ. ಅದೇ ರೀತಿ ಅಧಿಕಾರದಲ್ಲಿ ಇಲ್ಲದಂಥ ಜನ ಅಧಿಕಾರವನ್ನು ಕಬಳಿಸುವುದಕ್ಕೆ ಏನಾದರೂ ಪರವಾಗಿಲ್ಲ ನಾವು ಆ ಅಧಿಕಾರ ಪಡೆಯಬೇಕೆಂದು ದೃಷ್ಟಿಯಿಂದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅಂತಹ ಒಂದು ಕಾರ್ಯಕ್ರಮದ ಫಲದಿಂದ ತಿದ್ದುಪಡಿ ವಿಧೇಯಕ ಬಂದಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದೆ. ಕಾಂಗ್ರೆಸ್-ಐ ಪಕ್ಷದ ನೀತಿ ಏನಿದೆ ಆ ನೀತಿ ಇವತ್ತಿನ ದಿವಸ ಕೆಲವೇ ಜನರಿಗೆ ಹೇಳುವಂತಹ ನೀತಿಯೇ ಹೊರತು ಆಚರಣೆಯಲ್ಲಿ ತರುವುದಕ್ಕೆ ಮಾತ್ರ ಅಲ್ಲ. ಇವತ್ತಿನ ದಿವಸ ತಂದಿರತಕ್ಕ 1989ನೇ ತಿದ್ದುಪಡಿ ವಿಧೇಯಕ ಏನಿದೆ ಅದಕ್ಕೂ 64ನೇ ತಿದ್ದುಪಡಿ ವಿಧೇಯಕ ಏನಿದೆ ಅದಕ್ಕೂ ಸಂಬಂಧವಿರುವುದಿಲ್ಲ. ಈಗ 64ನೇ ತಿದ್ದುಪಡಿ ವಿಧೇಯಕದ

ಪರಿಚ್ಛೇದಗಳನ್ನು ನಾನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. 5ನೇ ಪ್ರಕರಣದಲ್ಲಿ ಹೇಳುತ್ತಾರೆ.

"The Chairperson of a Panchayat at the village level shall be chosen by election in such manner as the Legislature of the State may by law provide. The Panchayat upto intermediate or district level shall be elected by and from amongst the elected member thereof. Where the Chairperson of a Panchayat has been elected by and from amongst the elected members of the Panchayat, no resolution by the Panchayat, for removing him from the office of the Chairperson shall be valid and offective unless such resolution has been passed by a majority of the total number of the elected members of the Panchayat and by a majority of not less than two thirds of such members present and voting."

ನಾನು ಕೇಳುತ್ತಿದ್ದೇನೆ. ಇದು 64ನೇ ತಿದ್ದುಪಡಿ ವಿಧೇಯಕದಲ್ಲಿ ಇದೆಯೋ ಇಲ್ಲವೋ? ಈ 64ನೇ ತಿದ್ದುಪಡಿ ವಿಧೇಯಕದಲ್ಲಿ ಇದು ಇದೆ ಎಂದು ಮಾನ್ಯ ಬಸವಲಿಂಗಪ್ಪನವರು ಒಪ್ಪಿದರೆ ಈಗ ತಂದಿರುವ ಅಧ್ಯಾದೇಶ ಏನಿದೆ, ತಿದ್ದುಪಡಿ ಏನಿದೆ ಅದು ಆ ತಿದ್ದುಪಡಿಗನುಗುಣವಾಗಿದೆಯೇ ಅಥವಾ ಅದಕ್ಕೆ ತದ್ವಿರುದ್ಧವಾಗಿದೆಯೇ ಎಂಬ ಮಾತನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದು ಪಕ್ಷ ಬಸವಲಿಂಗಪ್ಪನವರು ನಾವು ತಂದಿರುವ ತಿದ್ದುಪಡಿ ವಿಧೇಯಕ ಈ ಒಂದು ವಿಧೇಯಕದ ಪರಿಚ್ಛೇದ ಏನಿದೆ ಅದರ ಪ್ರಕಾರ ಇದೆ ಅದಕ್ಕನುಗುಣವಾಗಿ ಎಂದು ಹೇಳುವುದಾದರೆ ನಾನು ಒಪ್ಪುತ್ತೇನೆ. ಇಲ್ಲದೇ ಹೋದರೆ ಏನು ಹೇಳುತ್ತೀರಿ? ಇಲ್ಲಿ ನಾವು ಹೇಳುವುದಕ್ಕೋಸ್ಕರ ಅದನ್ನು ಇಟ್ಟುಕೊಂಡಿದ್ದೇವೆ, ನಾವು ನಮಗೆ ಬೇಕಾದ ರೀತಿಯಲ್ಲಿ ನಾವು ಮಾಡುತ್ತೇವೆ ಎಂದು ಹೇಳುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ಈ ಒಂದು ವಿಧೇಯಕ ತಂದಿರುವ ಸಂಧರ್ಭದಲ್ಲಿ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಹೇಳಿದ್ದಾರೆ. ಮಾನ್ಯ ಹಿರಿಯರಾದಂಥ ಗೆಳೆಯ ರಂಗನಾಥ್‌ರವರು ಹೇಳುತ್ತಿದ್ದರು. ಆ ಮಾತನ್ನು ತಾವು ಅಲ್ಲಿದ್ದಾಗ ಹೇಳಿದ್ದಿರಿ. "Having regard to the adequacies in the existing system and keeping in view the directive principles enshrined in Articles 40 which aims at enrolling Panchayat with such powers and authority as are necessary to enble them function as the units of the Government. It is proposed to act as a new Constitution relating to the Panchayats." ಈ ರೀತಿ ಹೇಳಿಕೊಂಡು ಹೋಗುತ್ತಾರೆ. ಯಾವ ಒಂದು ಸಂಸ್ಥೆಗಳನ್ನು ನಾವು ಸ್ಥಳೀಯ ಸರ್ಕಾರ ಎಂದು ಪರಿಗಣಿಸಿ ಕಾರ್ಯ ನಿರ್ವಹಿಸಲು ಬೇಕಾದಂಥ ಸಾಕಷ್ಟು ಹಣವನ್ನು ಕೊಡಬೇಕೋ ಮತ್ತು ಅವರಿಗೆ ಬೇಕಾದಂತಹ ಕಾರ್ಯಕ್ರಮಗಳನ್ನು ಕೊಡುತ್ತೇವೆಂದು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದರು. ಅದನ್ನು ಇವತ್ತು ತಾವು ಮಾಡುತ್ತಿದ್ದೀರಾ? ಇವತ್ತು ಅವರು ಅದನ್ನು ಮಾಡುತ್ತಿಲ್ಲ. ಅದಕ್ಕೆ ಅವರ ಧಾಟಿಯಲ್ಲಿ ನಾನು ಹೇಳುವುದಿಲ್ಲ. ಈಗ ಅವರ ಧಾಟಿಯ ಮೇಲೆ ನಾವು ಮಾತನಾಡಿದರೆ ಅದು ಉಡಾಫೆ ಮಾತು ಎಂದು ಹೇಳುತ್ತಾರೆ. ಅದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ: ನಾವು ಏನು 40ರ ಪ್ರಕಾರ ಮಾಡುತ್ತೇವೆಂದು ಹೇಳಿದ್ದೆವೋ ಅದು ಇನ್ನೂ ಕಾನೂನು ಆಗಿಲ್ಲ. ಅದು ಹಾಗೆಯೇ ತತ್ವದ ರೂಪದಲ್ಲಿಯೇ ಉಳಿದಿದೆ. ಯಾವ ರೀತಿಯಲ್ಲಿ ಮಾಡಬೇಕು ಬಿಡಬೇಕು ಎಂಬ

ಬಗ್ಗೆ ನಾವು ಯೋಚನೆ ಮಾಡಬೇಕು. ಅದರೆ ಈ ಬಿಲ್‌ಗೆ ನಮ್ಮಲ್ಲಿ ಎಲ್ಲರಿಗೂ ಸಮ್ಮತಿಯುಂಟು ಆದ್ದರಿಂದ ದಯಮಾಡಿ ಪಾಸ್ ಮಾಡಿಕೊಡಿ.

ಶ್ರೀ ಹೆಚ್. ಏಕಾಂತಯ್ಯ: ತಮ್ಮ ಪಕ್ಷದ ಸಮ್ಮತಿ ಇಲ್ಲವೆನ್ನುವ ಮಾತನ್ನು ನಾನು ಹೇಳುವಷ್ಟು ಮೂರ್ಖನಲ್ಲ. ಮಾನ್ಯ ಅಧ್ಯಕ್ಷರೇ ಇವತ್ತಿನದಿವಸ ನಾನು ತಮ್ಮನ್ನು ಕೇಳುವುದೇನೆಂದರೆ ಇದರಲ್ಲಿ ಅಡಾಕಿಜಮ್ ಬಂದಿದೆಯೋ ಇಲ್ಲವೋ ಬಹುಶಃ ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ಅಥವಾ ವಿಧೇಯಕವನ್ನು ತಂದಾಗ ಅವೆಲ್ಲವನ್ನೂ ಸಹ ಇದರಲ್ಲಿ ಅಳವಡಿಸುತ್ತೇವೆ. ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೀರಾ?

ಉಪಾಧ್ಯಕ್ಷರು: ತಾವು 'ಬೇಗ ಮುಗಿಸಿ ಆಮೇಲೆ ಅವರು ಉತ್ತರ ಹೇಳುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ಉದ್ಭವವಾಗಿರತಕ್ಕಂಥ ಪ್ರಶ್ನೆ ಅಂದರೆ ಅದು ಒಂದು ನೀತಿಯ ಪ್ರಶ್ನೆ. ಅಧಿಕಾರ ವಿಕೇಂದ್ರೀಕರಣ ನೀತಿ ಏನು ಇದೆ ಆ ನೀತಿಯನ್ನು ಅನುಸರಿಸಬೇಕೆಂದು ಹೇಳುವಂತಹ ಜನರು ಇಂತಹ ಒಂದು ನೀತಿಯಲ್ಲಿ ನಂಬಿಕೆ ಇದೆ ಎಂದು ಹೇಳಿದರೆ ಆ ನೀತಿಯನ್ನು ಅನುಷ್ಠಾನಕ್ಕೆ ತಂದು ಅದನ್ನು ಜಾರಿಗೊಳಿಸಲು ಪ್ರಯತ್ನ ಮಾಡುತ್ತಿಲ್ಲ ಅದನ್ನು ಬಿಟ್ಟು ಅದಕ್ಕೆ ತದ್ವಿರುದ್ಧವಾಧ ರೀತಿಯಲ್ಲಿ ಇವತ್ತು ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತಿದ್ದೇನೆ. ಹೌದು ಇವತ್ತಿನ ದಿವಸ ಸಿಂಪಲ್ ಮೆಜಾರಿಟಿಯಿಂದ ಅಧಿಕಾರಕ್ಕೆ ಬರುತ್ತೇನೆ. ಅಧಿಕಾರಕ್ಕೆ ಬಂದ ಮೇಲೆ ಪುನಃ ಅಧಿಕಾರ ಹೋಗಬಾರದು ಎಂದು ಇನ್ನೊಂದು ಸಂಪೂರ್ಣವಾದ ಸಮಗ್ರವಾದ ಮಸೂದೆ ತಂದು ಅದರಲ್ಲಿ ಎರಡನೇ ಮೂರರಷ್ಟು ಇದ್ದರೆ ಮಾತ್ರ ಹೋಗಬೇಕೆಂದು ಹೇಳುವಂತಹ ಕಾನೂನು ತರುತ್ತೇವೆಂದು ಹೇಳಿದರೆ ಸರಿ ಹೋಗುತ್ತದೆಯೇ? ಅಂದರೆ ತಾವು ಅಧಿಕಾರಕ್ಕೆ ಬರಲಿಕ್ಕೆ ಅಥವಾ ಅಧಿಕಾರದಿಂದ ತೆಗೆಯಲಿಕ್ಕೆ ಒಂದು ಸಲ ಅಧಿಕಾರಕ್ಕೆ ಬಂದರೆ ಅಧಿಕಾರ ಹೋಗದ ರೀತಿಯಲ್ಲಿ ಆಗ ಮೂರನೇ ಎರಡರಷ್ಟು ಬಹುಮತ ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ಅಥವಾ ಅಂತಹ ಒಂದು ಉದ್ದೇಶ ಹೊಂದಿದ್ದೀರಾ? ಅಂತಹ ಒಂದು ಉದ್ದೇಶವೇನಾದರೂ ಇದ್ದರೆ ಆ ಒಂದು ಹಿನ್ನೆಲೆ ಏನಾದರೂ ಇದ್ದರೆ ಬಹಿರಂಗವಾಗಿ ಹೇಳಿ. ಇಲ್ಲ ಇಲ್ಲ ನಾವು ಬರಲೂ ಈ ಸರಳ ಬಹುಮತ ತರುತ್ತಿದ್ದೇವೆ ಅಧಿಕಾರಕ್ಕೆ ಬಂದ ಮೇಲೆ ಮೂರನೆ ಎರಡರಷ್ಟು ಬಹುಮತ ಇರಬೇಕೆಂದು ಸಮಗ್ರವಾದ ಮಸೂದೆ ತರುವುದರ ಮುಖಾಂತರ ನಾವು ತರುತ್ತೇವೆ. ಎನ್ನುವ ಮಾತನ್ನು ತಾವು ಹೇಳುವುದಾದರೆ ನಮ್ಮ ಅಭ್ಯಂತರವೇನೂ ಇಲ್ಲ.

ಮಾನ್ಯ ಅಧ್ಯಕ್ಷರೇ, ಆದ್ದರಿಂದ ಇವತ್ತಿನ ದಿವಸ ಈ ಒಂದು ಮಸೂದೆಯನ್ನು ಏನು ತಂದಿದ್ದಾರೆ. ಈ ಮಸೂದೆಯಲ್ಲಿ ಅವರ ಘೋಷಿತ ನೀತಿಗೆ ವಿರುದ್ಧವಾಗಿದೆ. ಆ ಪಕ್ಷದ ಹಿರಿಯ ಸದಸ್ಯರು ಇಲ್ಲವೇ ಆ ಪಕ್ಷದ ನೀತಿ ಈ ರೀತಿ ಇದೆ ಎಂದು ಹೇಳುತ್ತಿದ್ದಾರೆ. ಬಹಿರಂಗವಾಗಿ ನಾವು ಸಾಕಷ್ಟು ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ ಹಣ ಕೊಟ್ಟಿದ್ದೇವೆ. ಸಾಕಷ್ಟು ಅಧಿಕಾರ ಕೊಟ್ಟಿದ್ದೇವೆಂದು ಈ ಮಾತುಗಳೆಲ್ಲಾ ಕೇವಲ ಬೂಟಾಟಿಕೆ ಮಾತುಗಳೇ ವಿನಹ ಇದರಲ್ಲಿ ಅವರಿಗೆ ನಂಬಿಕೆ ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿಜವಾದಂತಹ ಅಧಿಕಾರ...

ಉಪಾಧ್ಯಕ್ಷರು: ಬೇಗ ಮುಗಿಸಿ ಆದಷ್ಟು ಸಂಕ್ಷಿಪ್ತವಾಗಿ ಹೇಳಿ ಮುಗಿಸಿ.

ಶ್ರೀ ಎಚ್. ಏಕಾಂತಯ್ಯ: ಇದರ ಬಗ್ಗೆ ನಾನು ಇನ್ನೂ ಮಾತನಾಡಬೇಕು. ನಾನು ಒಂದು ಸ್ಟ್ಯಾಟುಟರಿ ರೆಸಲ್ಯೂಷನ್ ಕೊಟ್ಟಿದ್ದೇನೆ. ಆದ್ದರಿಂದ ಅದರ ಬಗ್ಗೆ ನಾನು ಮಾತನಾಡಬೇಕಾಗಿದೆ. ನಿಜವಾದಂತಹ ಅಧಿಕಾರ ಮತ್ತು ಹೊಣೆಗಾರಿಕೆ ಕೊಡುವಂತಹ ಉದ್ದೇಶದಿರಿದ ನೀವು ಈ ಒಂದು ತಿದ್ದುಪಡಿಯನ್ನು ತಂದಿದ್ದರೆ

ಅದರ ಅರ್ಥವೇ ಬೇರೆ. ಆದರೆ ಇವತ್ತಿನ ದಿವಸ ತಾವು ತಂದಿರತಕ್ಕಂಥಾದ್ದು ತಿದ್ದುಪಡಿ ಅದಕ್ಕೆ ತದ್ವಿರುದ್ಧವಾಗಿದೆ. ಇನ್ನೊಂದು ಮಾತು ಹೇಳುತ್ತಿದ್ದರು ಏನು ಎಕ್ಸ್ ಅಫಿಷಿಯೋ ಮೆಂಬರ್ಸ್ ಇದ್ದಾರೆ. ಅವರಿಗೆ ನಾವು ಮತದಾನದ ಹಕ್ಕು ಕೊಡುವುದಿಲ್ಲ ಅವರು ಶಾಸಕರಿರಬಹುದು ಎಂ.ಪಿ.ಗಳು ಇರಬಹುದು ಅವರಿಗೆ ಮತದಾನದ ಹಕ್ಕು ಕೊಡುವುದಿಲ್ಲವೆಂದು ತಾವು ತಮ್ಮ ಘೋಷಿತವಾದ ನೀತಿಯಲ್ಲಿ ತಾವು ಹೇಳಿದ್ದೀರಿ. ಆದರೆ ತಾವು ಏನು ಮಾಡಿದ್ದೀರಿ ಸರ್ಕಾರ ಇದರ ಬಗ್ಗೆ ನಿಶ್ಯಬ್ದವಾಗಿದೆ. ಏಕೆಂದರೆ ಅದು ತಮಗೆ ವಿರುದ್ಧವಾಗಿದೆ. ಯಾವುದು ತಮಗೆ ಅನುಕೂಲವಾಗುತ್ತದೆಯೋ ಅದಕ್ಕೆ ವಿಧಾನ ಸೌಧದ ಮೇಲಿಂದ ತರುತ್ತೀರಿ. ಯಾವುದು ತಮಗೆ ಅನುಕೂಲ ಆಗುವುದಿಲ್ಲವೋ ಅದಕ್ಕೆ ಕೆಳಗಡೆ ನಿಶ್ಯಬ್ದವಾಗಿ ಕುಳಿತಿರಿ. ಇದು ಎಷ್ಟರಮಟ್ಟಿಗೆ ಸರಿ? ಇಲ್ಲವೇ ಹೇಳಿ, ಯಾವುವು ನಮಗೆ ಅನುಕೂಲವಾಗುತ್ತದೋ ಅದನ್ನೆಲ್ಲಾ ಮಾಡಿಕೊಳ್ಳುತ್ತೇವೆ, ನೀವು ಇದ್ದಾಗ ಮಾಡಿಕೊಂಡಿಲ್ಲವೇ ಎನ್ನುವ ಪ್ರವೃತ್ತಿ ನಿಮ್ಮಲ್ಲಿದ್ದರೆ ಹೇಳಿ, ಇವತ್ತಿನ ದಿವಸ ಇನ್ನೂ ಅನೇಕ ವಿಚಾರಗಳನ್ನು ಅವರು ಹೇಳಿದ್ದಾರೆ. ಈ ಒಂದು ವಿಧೇಯಕದಲ್ಲಿ ಮುಖ್ಯವಾಗಿ ನಾನು ಪ್ರಶ್ನೆ ಮಾಡುವುದಿಷ್ಟೇ, ಏನು 64ನೇ ತಿದ್ದುಪಡಿ ಪ್ರಕಾರ ಯಾವ ಒಂದು ನೀತಿಯನ್ನು ಅನುಸರಿಸಬೇಕೆಂದು ತಾವು ಹೇಳಿದ್ದೀರಿ, ಯಾವ 64ರ ತಿದ್ದುಪಡಿಯಲ್ಲಿ ತಮ್ಮ ನಿಷ್ಠೆ ಇದೆ ಎಂಬ ಮಾತನ್ನು ಪದೇ ಪದೇ ಹೇಳುತ್ತಿದ್ದೀರಿ, ಇದು ಕೇವಲ ಈ ದೇಶದ ಜನರನ್ನು ಮೋಸಗೊಳಿಸಲಿಕ್ಕೆ ಮತ್ತು ತಮ್ಮದೇ ಆದಂಥ ರೀತಿಯಲ್ಲಿ ಅಧಿಕಾರವನ್ನು ಪಡೆಯಲಿಕ್ಕೆ ಮತ್ತು ಜನತಂತ್ರ ನೀತಿಗೆ ವಿರುದ್ಧವಾಗಿ ಅಧಿಕಾರವನ್ನು ಪಡೆಯಲಿಕ್ಕೆ ತಂದಂಥ ಒಂದು ಮಸೂದೆ ಇದಾಗಿದೆಯೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತು ಏನು ತುರ್ತು ಸ್ಥಿತಿ, ಜರೂರು ಅವಶ್ಯಕತೆ ಈ ಜಿಲ್ಲಾ ಪರಿಷತ್ತುಗಳ ಬಗ್ಗೆ ಬಂದವು. ಆದರೆ ಇಂಥಾ ಒಂದು ಜರೂರು ಅವಶ್ಯಕತೆ ಅಥವಾ ತುರ್ತು ಪರಿಸ್ಥಿತಿ, Emergency and urgency to promulgate this ordinance.

ಇದು ಕೇವಲ ಜಿಲ್ಲಾ ಪರಿಷತ್ತಿಗೆ ಮಾತ್ರ ಏತಕೋಸ್ಕರ ಸೀಮಿತವಾಯಿತು ಇದೇ ಕಾನೂನು ಮಂಡಲ ಪಂಚಾಯಿತಿಗಳಿಗೆ ಅನ್ವಯವಾಗುವುದಾದರೆ, ಅವರಿಗೆ ಏತಕೋಸ್ಕರ ಈ ತುರ್ತು ಸ್ಥಿತಿ ಅಥವಾ ಜರೂರು ಅವಶ್ಯಕತೆ ಸರ್ಕಾರಕ್ಕೆ ಮನಗಾಣಲಿಲ್ಲ? ಅದಕ್ಕಿಂತಾ ಹೆಚ್ಚಾಗಿ ಮತ್ತೊಂದು ಪ್ರಶ್ನೆ ಕೇಳುತ್ತೇನೆ. ಈ ರಾಜ್ಯದಲ್ಲಿ ಸುಮಾರು 177 ನಗರಸಭೆಗಳು ಮತ್ತು ಪುರಸಭೆಗಳು ಏನಿವೆ,...

ಉಪಸಭಾಧ್ಯಕ್ಷಿಣಿಯವರು : ಈಗಾಗಲೇ ಅರ್ಧ ಗಂಟೆ ಮಾತನಾಡಿದ್ದೀರಿ. ತಮಗೆ ಇನ್ನು ಎಷ್ಟು ಹೊತ್ತುಬೇಕು?

ಶ್ರೀ ಹೆಚ್. ಏಕಾಂತಯ್ಯ : ಇನ್ನೂ ಅರ್ಧಗಂಟೆ ಬೇಕು. ನೀವು ಸಮಯವನ್ನು ಗೊತ್ತು ಮಾಡಿ ನಮಗೆ ಹೇಳಬೇಕು. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಸ್ಟ್ಯಾಟುಟರಿ ರೆಸೆಲ್ಯೂಷನ್ ಏನು ಬರುತ್ತದೆ ಅದಕ್ಕೆ ಸಂಬಂಧವಾಗಿ ನಮಗೆ ಮೊದಲೇ ಹೇಳಬೇಕು. ಅದು ಬಿಟ್ಟು ನೀವು 5 ನಿಮಿಷ ಮಾತ್ರ ಮಾತನಾಡಿ ಎಂದರೆ ನಾವು ಮಾತನಾಡುವ ಅವಶ್ಯಕತೆ ಆದರೂ ಏನಿದೆ? ಆಮೇಲೆ ಸನ್ಮಾನ್ಯ ಉಪಸಭಾಧ್ಯಕ್ಷಿಣಿಯವರೇ, ಈ ನಿರ್ಣಯ ಏನಾಗುತ್ತದೆ ಎಂದು ನನಗೆ ಗೊತ್ತಿದೆ. ಗೊತ್ತಿದ್ದರೂ ಸಹ ಏತಕ್ಕೆ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆಂದರೆ, ನಾವು ಈ ಕೆಲವೊಂದು ಕಾರಣಗಳು ಸಮಂಜಸವಾಗಿವೆಯೆಂದು ಸರ್ಕಾರದವರು ಒಪ್ಪಿ ಇದನ್ನು ಹಿಂದಕ್ಕೆ ಪಡೆಯುತ್ತಾರೇನೋ ಎಂದು ಹೇಳಬೇಕಾಗುತ್ತದೆ. ನಾನು ಸರ್ಕಾರವನ್ನು ಕೇಳುವುದಿಷ್ಟೇ. ತುರ್ತು ಸ್ಥಿತಿ, ಜರೂರು ಅವಶ್ಯಕತೆ ಬಂತಲ್ಲಾ? ಕೇವಲ ಜಿಲ್ಲಾ ಪರಿಷತ್ತಿಗೆ ಮಾತ್ರ ಏಕೆ ಬಂತು? ನಮ್ಮ ರಾಜ್ಯದಲ್ಲಿ 177 ನಗರಸಭೆಗಳು, ಕಾರ್ಪೊರೇಷನ್‌ಗಳು ಇವೆಯಲ್ಲಾ, ಅಲ್ಲಿರತಕ್ಕಂಥ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ತೆಗೆಯಲಿಕ್ಕೆ ಇದೇ ಕಾನೂನು ಇದೆ. ಅದನ್ನು

ಸಹ ಮಾರ್ಪಾಡು ಮಾಡುವಂತಹ ಅವಶ್ಯಕತೆ ಇದೆಯೆಂದು ನಿಮಗೆ ಕಾಣಲಿಲ್ಲವೋ? ಅಲ್ಲಿ ನಿಮಗೆ ಬೇಕಾದವರಿದ್ದಾರೆ ಎನ್ನುವ ಕಾರಣದಿಂದ ತಾವು ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಿಲ್ಲವೋ ಹೇಗೆ? ಇದನ್ನು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಇಲ್ಲಿ ನೀವು ಹೇಳಿರುವ ಕಾರಣ ಮೇಲುನೋಟಕ್ಕೆ ನಿಜವಾದಂಥ ಕಾರಣವಲ್ಲ. ಮೇಲು ನೋಟಕ್ಕೆ ನಿಜವಾದಂಥ ಕಾರಣವೆಂದರೆ ಏನಾದರೂ ಮಾಡಿ ತಮಗೆ ಮತ್ತು ತಮ್ಮ ಸರ್ಕಾರಕ್ಕೆ ವಿರುದ್ಧವಾಗಿರುವ ಜನ ಯಾರಿದ್ದಾರೆ, ಅವರ ಅಧಿಕಾರವನ್ನು ಹೇಗಾದರೂ ಮಾಡಿ ತೆಗೆದುಕೊಳ್ಳಬೇಕೆಂಬ ಎನ್ನುವ ಪೂರ್ವ ಸಂಕಲ್ಪದಿಂದ, ದುರುದ್ದೇಶದಿಂದ ಈ ಅಧ್ಯಾದೇಶವನ್ನು ತಂದಿರುವುದರಿಂದ ಈ ಅಧ್ಯಾದೇಶಕ್ಕೆ ನಾನು ವಿರೋಧ ವ್ಯಕ್ತ ಮಾಡುತ್ತೇನೆ ಹಾಗೂ ನಾನು ಇದಕ್ಕೆ ಬೆಂಬಲ ಕೊಡುವುದಿಲ್ಲ. ಇವತ್ತಿನ ದಿವಸ ಇನ್ನೊಂದು ಮಾತನ್ನು ಹೇಳುತ್ತೇನೆ. ಈ ಅಧ್ಯಾದೇಶವನ್ನು ತರುವಂತಹ ಪರಿಸ್ಥಿತಿ ಏನಿತ್ತು? ನಾನು ಆಗಲೇ ಹೇಳಿದೆ, When the session is likely to be convened or when the date of the Session is very clear and near, there is no necessity to issue the ordinance. ಈ ಮಾತನ್ನು ನಾನು ಹೇಳುವುದಿಲ್ಲ. ಲೋಕಸಭಾ ಸ್ಪೀಕರ್‌ರವರೂ ಹೇಳಿದ್ದಾರೆ. ಸಂಸದೀಯ ಸಂಪ್ರದಾಯದಲ್ಲಿ, ಇದು ಎಲ್ಲರೂ ಒಪ್ಪಿದಂಥ ಮಾತ್ರ ಯಾವಾಗ ವಿಧಾನ ಸಭೆ ಇಷ್ಟರಲ್ಲಿ ಸೇರುತ್ತದೆ. ಅಥವಾ ಸರ್ಕಾರಕ್ಕೆ ಖಚಿತವಾದ ತಾರೀಖು ಗೊತ್ತಿದ್ದರಿಂದ, ಅಂಥಾ ಸಂದರ್ಭದಲ್ಲಿ ಇಂಥಾ ಅಧ್ಯಾದೇಶಗಳನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ, ಅದನ್ನು ಮಾಡಬಾರದೆಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ಅಂಶವನ್ನು ಈಗಾಗಲೇ ಅನೇಕ ಜನ ತಾಂತ್ರಿಕ ಸಂಸ್ಥೆಗಳಲ್ಲಿರುವಂಥ ಅಧ್ಯಕ್ಷರು ಏನಿದ್ದಾರೆ, ಅವರು ಈ ಮಾತನ್ನು ಒತ್ತಿ ಹೇಳಿದ್ದಾರೆ. ಆದ್ದರಿಂದ ನಾನು ಹೇಳುವುದಿಷ್ಟೇ, ಇವತ್ತಿನ ದಿವಸ ಈ ಕಾನೂನನ್ನು ಏನು ತಂದಿದ್ದೀರಿ. ಇದು ತಾವು ಹೇಳಿದಂತಹ ನೀತಿಗೆ ವಿರುದ್ಧ ಆಗಿದೆ. ಯಾವುದು ತಮಗೆ ಅನುಕೂಲ ಆಗುತ್ತದೆ ಅದನ್ನು ಮಾತ್ರ ಆಯ್ಕೆ ಮಾಡಿಕೊಂಡು ಯಾವುದು ಅನರ್ಹ ಆಗುತ್ತದೆ ಆ ವಿಧಿಗಳನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಇದಕ್ಕೆ ನಾವು ವಿರೋಧ ವ್ಯಕ್ತ ಮಾಡುತ್ತೇವೆ. ಅದಕ್ಕೆ ನಾನು ಸರ್ಕಾರದಿಂದ ಬಯಸುವುದು ಏನೆಂದರೆ ತಾವು ಸರಳ ಬಹುಮತದ ಮೂಲಕ ಈ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ತೆಗೆದು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲ ತಾವು, ಇದೇ ಸರಳ ಬಹುಮತವನ್ನು ಮುಂಬರುವ ಮಸೂದೆಯಲ್ಲಿ ಸಹ ಅಳವಡಿಸಿದ್ದೀರಾ? ಇದಕ್ಕೆ ತಾವು ಉತ್ತರ ಕೊಡಬೇಕು. ಉತ್ತರ ಕೊಡದೇ ಇದ್ದರೆ ನಾನು ಹೇಳಿದಂತಹ ಆರೋಪಗಳನ್ನು ಅವರೇ ರುಜುವಾತು ಮಾಡಿದಂತಾಗುತ್ತದೆ. ಆದ್ದರಿಂದ ನಾನು ಏನು ಕೇಳುತ್ತಿದ್ದೇನೆ, ನಿಮಗೆ ನಿಜವಾಗಿ ಸಹ ನಿಮಗೆ ಒಂದು ತತ್ವದಲ್ಲಿ ನಂಬಿಕೆ ಇದ್ದರೆ, ನೀವು ಹೇಳಿದ ರೀತಿಯಲ್ಲಿ ದುರುದ್ದೇಶ ಇಲ್ಲ ಎಂಬ ಮಾತನ್ನು ತಾವು ಹೇಳುವುದಾದರೆ ಹೇಳಿ, ಇನ್ನು ಒಂದು ಮಾತು ಹೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರು ಮಾತನಾಡುತ್ತಾ ಜಿಲ್ಲಾ ಪರಿಷತ್ ಅಧ್ಯಕ್ಷರು ಅಬ್ಬಬ್ಬಾ ಏನು ಏನೋ ಮಾಡುತ್ತಾರೆ ಎಂದು ಇರಬಹುದು; ಆ ರೀತಿ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅದೇ ಮಾತನ್ನು ನಮ್ಮ ಮೇಲೆ ನಿಮ್ಮ ಮೇಲೆ ಹೇಳಿದರೆ ಆಗ ತಾವು ಏನು ಮಾಡುತ್ತೀರಿ?

ಶ್ರೀ ಬಿ.ಎಂ. ಇದಿನಬ್ಬ : ಜಿಲ್ಲಾ ಪರಿಷತ್ ಅಧ್ಯಕ್ಷರ ಮೇಲೆ ಸಾರಾ ಸಗಟಾಗಿ ಆಪಾದನೆ ಬರುತ್ತಿದೆ. 50 ಲಕ್ಷ, 30 ಲಕ್ಷ, 20 ಲಕ್ಷ ಒಂದು ಕೋಟಿ ರೂಪಾಯಿ ಹಾಳಾಯಿತು ಎಂದು ಅನ್ಯಾಯ ಮಾಡಿರುವ ಬಗ್ಗೆ ಆಪಾದನೆ ಬರುತ್ತಿದೆ...

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಇದಿನಬ್ಬನವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆರೋಪವಿದೆ. ಆರೋಪ ಬಂದ ಮೇಲೆ ತಾವು

ಏನು ಮಾಡಬೇಕು? ಅವರ ಬಗ್ಗೆ ವಿಚಾರಣೆ ಮಾಡಿ ಕಾನೂನು ಪ್ರಕಾರ ಶಿಕ್ಷೆ ಮಾಡುವಂತಹ ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಇದಿನಬ್ಬನವರೇ, ನಾವು ನೀವು ಹೀಗೆ ಹೇಳಿ ಆ ಆರೋಪಗಳು ಪ್ರಕಟ ಆದ ಮೇಲೆ ಯಾರ ಮೇಲೆ ಸಂಶಯ ಪಟ್ಟರಲ್ಲ, ಇಂತಹ ಭ್ರಷ್ಟಾಚಾರ ಮಾಡಿದ್ದಾರೆ ಎಂದು, ಆ ಜನರು ಬೇರೆಯವರ ಸುಲಿಗೆಗೆ ಪಾತ್ರರಾಗಿದ್ದಾರೆ. ತಮಗೆ ಅರ್ಥ ಆಯಿತೆಂದು ಕಾಣುತ್ತದೆ. ಅದಕ್ಕೆ ಬದಲಾಗಿ ನೀವು ಯಾರ ಮೇಲೆ ನಿರ್ಧಿಷ್ಟವಾದ ಭ್ರಷ್ಟಾಚಾರದ ಆರೋಪ ಇದೆ, ನೀವು ಅವರ ಮೇಲೆ ಶಿಕ್ಷೆ ವಿಧಿಸುವಂತಹ ಕ್ರಮವನ್ನು ಏನಾದರೂ ತೆಗೆದುಕೊಂಡಿದ್ದೀರಾ ಹೇಳಿ? ಅದಕ್ಕೆ ಬದಲಾಗಿ ಆ ಆರೋಪಗಳನ್ನು ತಾವು ಏನು ಮಾಡುತ್ತಿದ್ದೀರಿ, ಅದು ಸರೀನಾ? ನಾನು ಹೇಳುತ್ತೇನೆ, ಇವತ್ತು ನನ್ನ ಮೇಲೆ ಆರೋಪ ಇರಬಹುದು, ನನ್ನ ಪಕ್ಷದ ಯಾವುದೇ ಜಿಲ್ಲಾ ಪರಿಷತ್ ಅಧ್ಯಕ್ಷರ ಮೇಲೆ ಆರೋಪ ಇದ್ದರೆ ನಾನು ನಿಮಗೆ ಬೆಂಬಲ ಕೊಡುತ್ತೇನೆ, ಅವನನ್ನು ವಿಚಾರಣೆ ಮಾಡಿ ಅವನಿಗೆ ಜೈಲಿಗೆ ಕಳಿಸುವುದಕ್ಕೆ ಅವನಿಂದ ಹಣ ವಸೂಲಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಿ. ಅದಕ್ಕೆ ಬದಲಾಗಿ ಕೇವಲ ರಾಜಕೀಯಕೋಸ್ಕರ ಕೇವಲ ಆರೋಪಗಳನ್ನು ಪುನರಾವರ್ತನೆ ಮಾಡಿ ಯಾರ ಮೇಲೂ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಇವತ್ತು ಜಿಲ್ಲಾ ಪರಿಷತ್ ಅಧ್ಯಕ್ಷರ ಮೇಲೆ ಮತ್ತು ಬೇರೆ ಅಧಿಕಾರಿ ವರ್ಗದವರ ಮೇಲೆ ತಾವು ಆರೋಪ ಮಾಡಿದ್ದೀರಿ. ಯಾವ ಆರೋಪದ ಮೇಲೆ ಇಲ್ಲಿಯರೆಗೆ ನಿಮಗೆ ದೂರು ಬಂದಿದೆ, ಬಂದಂತಹ ದೂರುಗಳ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ? ಎಷ್ಟು ದಿವಸ ಬೇಕು ಇದಕ್ಕೆ? ನಮಗೆ ಸದಿಚ್ಛೆ ಬೇಕು. ಇದು ಕೇವಲ ಒಂದು ನೆಪ ಆಗಬಾರದೆಂದು ನಾನು ಹೇಳುತ್ತಿದ್ದೇನೆ. ಇವತ್ತಿನ ದಿವಸ ತಾವು ಹೇಳುವಂತಹ ಮಾತಿನಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಸುಂದರವಾದಂತಹ ಭ್ರಷ್ಟಾಚಾರದ ದೇವಿ ನಗ್ನಳಾಗಿ ಬೀದಿಯಲ್ಲಿ ನರ್ತನ ಮಾಡುತ್ತಿದ್ದಾಳೆ. ತಾವು ಕೊಂಬು ಕಹಳೆ ಬಾರಿಸುವುದಾದರೆ ಆ ದೇವಿ ಸುಮ್ಮನೆ ಇರುವುದಕ್ಕೆ ಸಾಧ್ಯವೇ ಸಾಧ್ಯ ಇಲ್ಲ. ಮೊದಲು ಕೊಂಬು ಕಹಳೆ ಬಾರಿಸುವುದನ್ನು ಬಿಟ್ಟು ಅದರ ಮೇಲೆ ಕ್ರಮ ತೆಗೆದುಕೊಳ್ಳುವಂತಹ ಪ್ರವೃತ್ತಿ ತಮಗೆ ಬಂದರೆ ಆಗ ಈ ಭ್ರಷ್ಟಾಚಾರದ ದೇವಿ ನಗ್ನಳಾಗಿ ಕುಣಿಯುವುದರ ಬದಲು ಎಲ್ಲಿಯಾದರೂ ಹೋಗಲಿಕ್ಕೆ ಸಾಧ್ಯವಾಗುತ್ತದೆ. ಈ ಮಾತನ್ನು ಹೇಳಬೇಕಾದರೆ ಯಾವುದೇ ದುರುದ್ದೇಶದಿಂದ ಈ ಮಾತನ್ನು ಹೇಳುತ್ತಿಲ್ಲ. ಕೇವಲ ಭ್ರಷ್ಟಾಚಾರದ ಮಾತನ್ನು ಇಲ್ಲಿ ಹೇಳಿಕೊಂಡು....

ಉಪಾಧ್ಯಕ್ಷರು : ತಾವು ಇನ್ನು ಭಾಷಣವನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅವರು ಯಾರ ಕಾಲದಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ? ಗುಲ್ಬರ್ಗಾದ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಅಧಿಕಾರಿಗಳು....

ಶ್ರೀ ಹೆಚ್ ಏಕಾಂತಯ್ಯ : ಮಾನ್ಯ ಶಿವರಾಮೇಗೌಡರಿಗೆ ಬೇಕಾದರೆ ಉತ್ತರ ಹೇಳುತ್ತೇನೆ. ಯಾರ ಕಾಲದಲ್ಲಿ ಭ್ರಷ್ಟಾಚಾರ ಮಾಡಿದ್ದರೂ ಸಹ ಯಾರು ನೇರವಾಗಿ ಜವಾಬ್ದಾರಿ ಆಗಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ನಮ್ಮ ಪಕ್ಷದ ಬೆಂಬಲ ಇದೆ ಮತ್ತು ನನ್ನ ಬೆಂಬಲ ಇದೆ. ಮಾನ್ಯ ಇದಿನಬ್ಬನವರು ಹೇಳಿದರು. ಹಲವಾರು ಲೂಪ್ ಹೋಲ್ಸ್‌ಗಳಾಗಿವೆ ಎಂದು. ಲಕ್ಷಾಂತರ ರೂಪಾಯಿಗಳ ಅವ್ಯವಹಾರ ಆಗಿದೆ ಎಂದು ನಾನು ಒಪ್ಪುತ್ತೇನೆ. ಲಕ್ಷಾಂತರ ರೂಪಾಯಿ ಅವ್ಯವಹಾರ ಆಗಿದೆ ಎಂದು ಏನು ಆರೋಪ ಇದೆ, ಆ ಬಗ್ಗೆ ನಾನು ಕೇಳುತ್ತೇನೆ, ಕೋಟ್ಯಾಂತರ ರೂಪಾಯಿ ಅವ್ಯವಹಾರ ಮೇಲ್ಮಟ್ಟದಲ್ಲಿ ಆಗಿದೆ ಎಂಬ ಆರೋಪಗಳು ಇವೆಯಲ್ಲಾ ಅದಕ್ಕೆ ಏನು ಹೇಳುತ್ತೀರಿ? ಕಮೀಷನ್ ಆಫ್ ಎನ್‌ಕ್ವೈರಿ ಆಕ್ಟ್ ಪ್ರಕಾರ ಇಂತಹವರ ಮೇಲೆ ವರ್ಷಗಟ್ಟಲೆ ಆದರೂ ಸರ್ಕಾರ ಕ್ರಮ ತೆಗೆದುಕೊಳ್ಳಲಿಲ್ಲ. ಇದರ ಬಗ್ಗೆ

ತಾವು ಏನು ಹೇಳುತ್ತೀರಿ? ಕೇವಲ ಆರೋಪ ಮಾಡುವುದರ ಮುಖಾಂತರ ನಮ್ಮನ್ನು ಸುಮ್ಮನೆ ಇರಿಸುವುದಕ್ಕೆ ಪ್ರಯತ್ನ ಮಾಡಬೇಡಿ.

ಭ್ರಷ್ಟಾಚಾರವನ್ನು ಕಂಡುಹಿಡಿಯುವುದಕ್ಕೆ, ಭ್ರಷ್ಟಾಚಾರಿಗಳನ್ನು ಪತ್ತೆ ಹಚ್ಚುವುದಕ್ಕೆ ನಾವು ನಿಮಗೆ ಸಹಾಯ ಮಾಡುತ್ತೇವೆ. ನಾವು ನಿಮ್ಮ ಜೊತೆಯಲ್ಲಿ ಇದ್ದೇವೆ. ಆದರೆ ದುರುದ್ದೇಶದಿಂದ ಈ ಮಾತನ್ನು ಹೇಳಬೇಡಿ. ಯಾವುದೇ ರೀತಿಯ ಭ್ರಷ್ಟಾಚಾರವನ್ನು ಜಿಲ್ಲಾ ಪರಿಷತ್ತಿನಲ್ಲಿ ಯಾರಾದರೂ ಮಾಡಿದ್ದರೆ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ಅದಕ್ಕೆ ಬದಲಾಗಿ ನೀವು ಜನತಂತ್ರ ಸಂಸ್ಥೆಗಳನ್ನು ನಾಶ ಮಾಡಲಿಕ್ಕೆ ಮತ್ತು ಅವುಗಳ ಅಧಿಕಾರವನ್ನು ಮೊಟಕು ಮಾಡಲಿಕ್ಕೆ ಈ ಒಂದು ನೆಪವನ್ನು ಒಡ್ಡಬೇಡಿ ಎಂದು ಹೇಳುತ್ತೇನೆ. ಮಾನ್ಯ ಸಚಿವರು ಅಲ್ಲಿಯ ಅಧ್ಯಕ್ಷರನ್ನು ತೆಗೆಯುವ ಹಾಗಿಲ್ಲ ಎಂದು ಹೇಳಿದರು. ಸ್ವಾಮಿ ನಿಮ್ಮಲ್ಲಿ ಇದಕ್ಕೆ ಕಾನೂನು ಇಲ್ಲವಾ? ಜಿಲ್ಲಾ ಪರಿಷತ್ತಿನಲ್ಲಿ ಇದಕ್ಕೆ ಒಂದು ಕಾನೂನು ಇದೆ. ಆ ಕಾನೂನನ್ನು ಸಹ ಬಹುಮತ ಎಂದು ಮಾಡಿದ್ದೀರಿ? ಏಕೆ? ಸಂಬಂಧಪಟ್ಟವರು ಏನಾದರೂ ತಪ್ಪುಗಳನ್ನು ಮಾಡಿದ್ದರೆ ಅವನ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ಅವನನ್ನು ಸದಸ್ಯತ್ವದಿಂದ ರದ್ದು ಮಾಡುವುದಕ್ಕೆ ಅಧ್ಯಕ್ಷರ, ಪದವಿಯಿಂದ ತೆಗೆದುಹಾಕುವುದಕ್ಕೆ ಕಾನೂನು ಇಲ್ಲವೇ? ಆದರೆ ಆ ಕೆಲಸವನ್ನು ಮಾಡುವುದಕ್ಕೆ ನೀವು ತಯಾರಾಗಿಲ್ಲ. ಏಕೆಂದರೆ ನಿಮ್ಮದೆಲ್ಲಾ ಹೊರಗಡೆ ಬರುತ್ತವೆ? ಮತ್ತೊಂದು ಈಗಾಗಲೇ ಈ ದೇಶದಲ್ಲಿ ಇದೆ, ನಿಯಮ 271ರ ಪ್ರಕಾರ ಈ ಜಿಲ್ಲಾ ಪರಿಷತ್‌ಗಳನ್ನು ವಿಸರ್ಜನೆ ಮಾಡುವಂಥ ಅಧಿಕಾರ ತಮಗೆ ಇದೆ, ಅದನ್ನು ಕೂಡ ತಾವುಗಳು ಮಾಡುವುದಕ್ಕೆ ತಯಾರಾಗಿಲ್ಲ. ಪರ್ಯಾಯವಾದಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಅವರು ವಿವಾದಾತ್ಮಕವಾದಂಥ ಹೇಳಿಕೆಯಲ್ಲಿ ಹೇಳಿದ್ದರು. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ ಪ್ರಕರಣ 271 ರ ಪ್ರಕಾರ ಸ್ಪಷ್ಟವಾದಂಥ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿದ್ದೇವೆ.

"In the opinion of the Government , if Zilla Parishad exceeds or abuses its power or is not competent to perform or make persistent default in the performance of the duties imposed on it under this Act or any other laws for the time being in force, the Government may by an order published in the official Gazette dissolve such Zill Parishad."

ಮಾನ್ಯ ಬಸವಲಿಂಗಪ್ಪನವರಿಗೆ ಇದಕ್ಕಿಂತ ದೊಡ್ಡ ಅಧಿಕಾರ ಏತಕ್ಕಾಗಿ ಬೇಕು? ಪ್ರಕರಣ 271 ರ ಪ್ರಕಾರ ನೀವು ಜಿಲ್ಲಾ ಪರಿಷತ್ತನ್ನು ವಿಸರ್ಜನೆ ಮಾಡುವುದಕ್ಕೆ ಅವಕಾಶ . ಮತ್ತು ಅಧಿಕಾರ ತಮಗೆ ಇದೆ. ಆ ಕೆಲಸವನ್ನು ತಾವು ಮಾಡಿ. ಆದರೆ ನೀವು ಆ ಕೆಲಸವನ್ನು ಮಾಡುವುದಿಲ್ಲ? ಏಕೆ ಮಾಡುವುದಿಲ್ಲ? ಅಲ್ಲಿಗೆ ನಿಮ್ಮ ಪಕ್ಷದ ಪ್ರತಿನಿಧಿಗಳನ್ನು ಪುನಃ ಅಧ್ಯಕ್ಷರನ್ನಾಗಿ ಮಾಡುವಂಥ ಅವಕಾಶ ನಿಮಗೆ ಬರುವುದಿಲ್ಲ. ಒಂದು ಸಾರಿ ವಿಸರ್ಜನೆ ಮಾಡಿದರೆ ಮುಂದೆ ಅಲ್ಲಿ ಚುನಾವಣೆಯನ್ನು ಮಾಡಬೇಕಾಗುತ್ತದೆ. ಚುನಾವಣೆಯಲ್ಲಿ ಜನರು ಯಾರಿಗೆ ಮತ ಹಾಕುತ್ತಾರೆಂಬ ಬಗ್ಗೆ ನಿಮಗೂ ನಂಬಿಕೆ ಇಲ್ಲ, ನಮಗೂ ನಂಬಿಕೆ ಇಲ್ಲ. ಅದಕ್ಕೆ ಬದಲಾಗಿ ಈಗ ನಮ್ಮವರನ್ನೇ ಹಾಕೋಣ ಎಂಬ ಒಂದು ದುರುದ್ದೇಶದಿಂದ ಈ ಸುಗ್ರೀವಾಜ್ಞೆಯನ್ನು ಹೊರಡಿಸಿ ಅದರ ಮುಖಾಂತರ ಅಧಿಕಾರವನ್ನು ಕಬಳಿಸುವಂಥ ಪ್ರಯತ್ನವನ್ನು ಮಾಡಿದ್ದೀರಿ. ಈ ನಿಮ್ಮ ತತ್ವ ಏನಿದೆ, ನೀವು ಅನುಸರಿಸಿರುವಂಥ ನೀತಿ ಏನಿದೆ, ಇದು ಒಂದಕ್ಕೊಂದಕ್ಕೆ ತದ್ವಿರುದ್ಧವಾಗಿದೆ. ನೀವು ಕೇವಲ ನಮಗೆ ಮೋಸ ಅಥವಾ ವಂಚನೆ ಮಾಡುವುದಕ್ಕೆ ಈ ದೇಶದ ಜನರಿಗೆ ತತ್ವದ ಮಾತನ್ನು ಹೇಳುತ್ತಾ ಇದ್ದೀರಿ. ನಿಜವಾಗಿಯೂ ಸಹ ನೀವು ಅಧಿಕಾರಕ್ಕೋಸ್ಕರವಾಗಿ ಯಾವ ಮಟ್ಟಕ್ಕೂ

ಹೋಗುವುದಕ್ಕೆ ತಯಾರಾಗಿದ್ದೀರಿ ಎಂಬುದಕ್ಕೆ ಈ ಒಂದು ಅಧ್ಯಾದೇಶವನ್ನು ಹೊರಡಿಸಿದ್ದನ್ನು ನೋಡಿದರೆ ತಿಳಿಯುತ್ತದೆ. ಇಷ್ಟನ್ನು ಹೇಳಿ ನನಗೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ಈ ನಿರ್ಣಯವನ್ನು ಬೆಂಬಲಿಸುವುದರ ಮೂಲಕ ಐತಿಹಾಸಿಕವಾದಂಥ ಒಂದು ನಿರ್ಣಯವಾಗುತ್ತದೆ. ಇದಕ್ಕೆ ನೀವ ವಿಶೇಷವಾದಂಥ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಂಡು ಮಾನ್ಯ ಸದನದ ಆಡಳಿತ ಹಾಗೂ ಎದುರು ಪಕ್ಷದವರಲ್ಲಿಯೂ ಸಹ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಮಾನ್ಯ ಸಭಾಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರ ಮಾತಿನಲ್ಲಿ ಹೇಳುವುದಾದರೆ, ಇದೊಂದು ಹೊಸ ಪ್ರಯೋಗ, ಒಂದು ಹೊಸ ಪ್ರಯೋಗವನ್ನು ಅವರು ನಡೆಸಿದ್ದಾರೆ. ಈ ರಾಜ್ಯದ ಜನತೆಯೊಂದಿಗೆ ಈ ಸರಕಾರ ಮತ್ತು ಸಚಿವರು ಹೊಸ ಪ್ರಯೋಗವನ್ನು ಮಾಡುತ್ತಿದ್ದಾರೆ. ಈ ಹೊಸ ಪ್ರಯೋಗದಲ್ಲಿ ಅವರ ಆಪಾದನೆ ವಿಶೇಷತಃ ಈ ತಿದ್ದುಪಡಿ ತರಲಿಕ್ಕೆ ಅಲ್ಲಿ ಕೊಟ್ಟಂಥ ಹಣವನ್ನು ಸರಿಯಾಗಿ ವ್ಯಯ ಮಾಡಿಲ್ಲ, ಅಲ್ಲಿ ಹಣದ ಅಪವ್ಯಯವಾಗಿದೆ, ಅಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ, ಅಸಮರ್ಪಕ ಈ ರೀತಿಯಲ್ಲಿ ಅವರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಸರಕಾರದ ಆದೇಶವನ್ನು ಕೂಡ ಸರಿಯಾಗಿ ಪಾಲಿಸುತ್ತಿಲ್ಲ. ಈ ಕಾರಣಗಳಿಗೆ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದ್ದಾರೆ. ಅವರು ಬಹುಮತವನ್ನು ಕಳೆದುಕೊಂಡು ಅಧಿಕಾರದಲ್ಲಿದ್ದಾರೆ ಎಂಬ ಆರೋಪವನ್ನು ಕೂಡ ಹೇಳಿದ್ದಾರೆ. ಆದರೆ ನಿಜವಾಗಿ ಜಿಲ್ಲಾ ಪರಿಷತ್‌ಗೆ ಕೊಟ್ಟಂಥ ಹಣವನ್ನು, ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೊಟ್ಟಂಥ ಹಣವನ್ನು ಈ ಸರಕಾರ ಅವರಿಂದ ವಾಪಸ್ಸು ತೆಗೆದುಕೊಂಡಿದೆ. ಹೀಗಾದರೆ ಯಾವ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಿದೆ? ಹಾಗೆ ಅವರು ಮಾಡತಕ್ಕಂಥ ಕೆಲಸವನ್ನು ಪೂರ್ಣ ಮಾಡಲು ಬಿಡದೆ, ಅವರಿಗೆ ಕೊಟ್ಟಂಥ ಹಣವನ್ನು ಸರಕಾರದವರು ವಾಪಸ್ ಪಡೆದು ಅವರ ಮೇಲೆ ಇಂಥ ಆರೋಪಗಳನ್ನು ಮಾಡುವುದು ಸರಿಯೇ?

ಅದೇ ರೀತಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಮಂಡಲ ಪಂಚಾಯಿತಿಗಳಿಗೆ ಅಭಿವೃದ್ಧಿ ಕಾರ್ಯಗಳಿಗೆಂದು ಕೊಟ್ಟಂಥ ಹಣವನ್ನು ವಾಪಸ್ ಪಡೆದು ಬರ ಪರಿಹಾರಕ್ಕೆಂದು ಬಳಸಿದರೆ ಅವು ಹೇಗೆ ಕೆಲಸ ಮಾಡಬೇಕು? ಆ ಸಂಸ್ಥೆಗಳ ಹೆಸರು ಕೆಡಿಸುವುದಕ್ಕೆಂದು ಈ ಸರ್ಕಾರ ಪೂರ್ವೋದ್ದೇಶದಿಂದ ತಿದ್ದುಪಡಿ ತಂದಿದೆ, ಆದ್ದರಿಂದ ಈ ಹೇಳಿಕೆ ಸರಿಯಲ್ಲ, ಸಮರ್ಪಕವಲ್ಲ. ಜಿಲ್ಲಾ ಪರಿಷತ್‌ಗಳು ಸರಿಯಾಗೇ ಕೆಲಸ ಮಾಡುತ್ತಿವೆ. ಸರ್ಕಾರ ಕೊಡುತ್ತಿರುವ ಕಾರಣಗಳು ನಿರಾಧಾರವಾಗಿವೆ. ನಾನು ತಮ್ಮ ಮೂಲಕ ಕೇಳಬಯಸುತ್ತೇನೆ. ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡುವಲ್ಲಿ ಕುಂಠಿತವಾಗಿಲ್ಲವೇ? ಹೇರಳ ಹಣವಿದ್ದರೂ ಏನೂ ಕೆಲಸಗಳಾಗಿಲ್ಲ, ಹಾಗಾದರೆ ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಇಲ್ಲಿ ಸರ್ಕಾರ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ತಾನು ಅಭಿವೃದ್ಧಿ ಕೆಲಸಗಳನ್ನು ಮಾಡದಿರುವಾಗ್ಯೂ ಇನ್ನೊಬ್ಬರ ಮೇಲೆ ನೆಪ ಹೇಳಿ ದುರುದ್ದೇಶದಿಂದ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ಹೇಳುತ್ತೇನೆ. ರಾಜ್ಯಾಂಗದ 64ನೇ ತಿದ್ದುಪಡಿಗನುಗುಣವಾಗಿ ಇಲ್ಲಿ ತಿದ್ದುಪಡಿ ತರಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಪದೇ ಪದೇ ಹೇಳಿದ್ದಾರೆ. 64ನೇ ತಿದ್ದುಪಡಿ ರೀತ್ಯಾ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ತೆಗೆಯಬೇಕಾದರೆ ಮೂರನೇ ಎರಡು ಬಹುಮತ ಇದ್ದರೆ ಮಾತ್ರ ಸಾಧ್ಯವೆಂದು ಸ್ಪಷ್ಟವಾಗಿದೆ. ಅದಕ್ಕೆ ವ್ಯತಿರಿಕ್ತವಾಗಿ ಇದು ಗ್ರಾಮೀಣಾಭಿವೃದ್ಧಿ ಸಚಿವರು ತಿದ್ದುಪಡಿ ತಂದಿದ್ದಾರೆ. ಇದು 64ನೇ ತಿದ್ದುಪಡಿ ರೀತ್ಯಾ ಇದೆ ಎನ್ನುವುದು ಸರಿಯಿಲ್ಲ ಮತ್ತು ಅದರಲ್ಲಿ ಶಾಸಕರಿಗೆ ಜಿಲ್ಲಾ ಪರಿಷತ್ತಿನಲ್ಲಿ ಮತ ಕೊಡಲು ಅವಕಾಶ ಇಲ್ಲ, ಆದರೆ ಈ ಒಂದು ಕಾನೂನಿನಲ್ಲಿ ಶಾಸಕರಿಗೆ

ಹೋಗುವುದಕ್ಕೆ ತಯಾರಾಗಿದ್ದೀರಿ ಎಂಬುದಕ್ಕೆ ಈ ಒಂದು ಅಧ್ಯಾದೇಶವನ್ನು ಹೊರಡಿಸಿದ್ದನ್ನು ನೋಡಿದರೆ ತಿಳಿಯುತ್ತದೆ. ಇಷ್ಟನ್ನು ಹೇಳಿ ನನಗೆ ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ಈ ನಿರ್ಣಯವನ್ನು ಬೆಂಬಲಿಸುವುದರ ಮೂಲಕ ಐತಿಹಾಸಿಕವಾದಂಥ ಒಂದು ನಿರ್ಣಯವಾಗುತ್ತದೆ. ಇದಕ್ಕೆ ನೀವ ವಿಶೇಷವಾದಂಥ ಬೆಂಬಲವನ್ನು ಕೊಡಬೇಕೆಂದು ಕೇಳಿಕೊಂಡು ಮಾನ್ಯ ಸದನದ ಆಡಳಿತ ಹಾಗೂ ಎದುರು ಪಕ್ಷದವರಲ್ಲಿಯೂ ಸಹ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್) : ಮಾನ್ಯ ಸಭಾಧ್ಯಕ್ಷರೇ ಈ ವಿಚಾರದಲ್ಲಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರ ಮಾತಿನಲ್ಲಿ ಹೇಳುವುದಾದರೆ, ಇದೊಂದು ಹೊಸ ಪ್ರಯೋಗ, ಒಂದು ಹೊಸ ಪ್ರಯೋಗವನ್ನು ಅವರು ನಡೆಸಿದ್ದಾರೆ. ಈ ರಾಜ್ಯದ ಜನತೆಯೊಂದಿಗೆ ಈ ಸರಕಾರ ಮತ್ತು ಸಚಿವರು ಹೊಸ ಪ್ರಯೋಗವನ್ನು ಮಾಡುತ್ತಿದ್ದಾರೆ. ಈ ಹೊಸ ಪ್ರಯೋಗದಲ್ಲಿ ಅವರ ಆಪಾದನೆ ವಿಶೇಷತಃ ಈ ತಿದ್ದುಪಡಿ ತರಲಿಕ್ಕೆ ಅಲ್ಲಿ ಕೊಟ್ಟಂಥ ಹಣವನ್ನು ಸರಿಯಾಗಿ ವ್ಯಯ ಮಾಡಿಲ್ಲ, ಅಲ್ಲಿ ಹಣದ ಅಪವ್ಯಯವಾಗಿದೆ, ಅಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಸಾಕಷ್ಟು ಪ್ರಮಾಣದಲ್ಲಿ ಆಗಲಿಲ್ಲ, ಅಸಮರ್ಪಕ ಈ ರೀತಿಯಲ್ಲಿ ಅವರಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಸರಕಾರದ ಆದೇಶವನ್ನು ಕೂಡ ಸರಿಯಾಗಿ ಪಾಲಿಸುತ್ತಿಲ್ಲ. ಈ ಕಾರಣಗಳಿಗೆ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ಹೇಳಿದ್ದಾರೆ. ಅವರು ಬಹುಮತವನ್ನು ಕಳೆದುಕೊಂಡು ಅಧಿಕಾರದಲ್ಲಿದ್ದಾರೆ ಎಂಬ ಆರೋಪವನ್ನು ಕೂಡ ಹೇಳಿದ್ದಾರೆ. ಆದರೆ ನಿಜವಾಗಿ ಜಿಲ್ಲಾ ಪರಿಷತ್‌ಗೆ ಕೊಟ್ಟಂಥ ಹಣವನ್ನು, ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೊಟ್ಟಂಥ ಹಣವನ್ನು ಈ ಸರಕಾರ ಅವರಿಂದ ವಾಪಸ್ಸು ತೆಗೆದುಕೊಂಡಿದೆ. ಹೀಗಾದರೆ ಯಾವ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ ಸಾಧ್ಯವಿದೆ? ಹಾಗೆ ಅವರು ಮಾಡತಕ್ಕಂಥ ಕೆಲಸವನ್ನು ಪೂರ್ಣ ಮಾಡಲು ಬಿಡದೆ, ಅವರಿಗೆ ಕೊಟ್ಟಂಥ ಹಣವನ್ನು ಸರಕಾರದವರು ವಾಪಸ್ ಪಡೆದು ಅವರ ಮೇಲೆ ಇಂಥ ಆರೋಪಗಳನ್ನು ಮಾಡುವುದು ಸರಿಯೇ?

ಅದೇ ರೀತಿ ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಮಂಡಲ ಪಂಚಾಯಿತಿಗಳಿಗೆ ಅಭಿವೃದ್ಧಿ ಕಾರ್ಯಗಳಿಗೆಂದು ಕೊಟ್ಟಂಥ ಹಣವನ್ನು ವಾಪಸ್ ಪಡೆದು ಬರ ಪರಿಹಾರಕ್ಕೆಂದು ಬಳಸಿದರೆ ಅವು ಹೇಗೆ ಕೆಲಸ ಮಾಡಬೇಕು? ಆ ಸಂಸ್ಥೆಗಳ ಹೆಸರು ಕೆಡಿಸುವುದಕ್ಕೆಂದು ಈ ಸರ್ಕಾರ ಪೂರ್ವೋದ್ದೇಶದಿಂದ ತಿದ್ದುಪಡಿ ತಂದಿದೆ, ಆದ್ದರಿಂದ ಈ ಹೇಳಿಕೆ ಸರಿಯಲ್ಲ, ಸಮರ್ಪಕವಲ್ಲ. ಜಿಲ್ಲಾ ಪರಿಷತ್‌ಗಳು ಸರಿಯಾಗೇ ಕೆಲಸ ಮಾಡುತ್ತಿವೆ. ಸರ್ಕಾರ ಕೊಡುತ್ತಿರುವ ಕಾರಣಗಳು ನಿರಾಧಾರವಾಗಿವೆ. ನಾನು ತಮ್ಮ ಮೂಲಕ ಕೇಳಬಯಸುತ್ತೇನೆ. ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಮಾಡುವಲ್ಲಿ ಕುಂಠಿತವಾಗಿಲ್ಲವೇ? ಹೇರಳ ಹಣವಿದ್ದರೂ ಏನೂ ಕೆಲಸಗಳಾಗಿಲ್ಲ, ಹಾಗಾದರೆ ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ? ಇಲ್ಲಿ ಸರ್ಕಾರ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ತಾನು ಅಭಿವೃದ್ಧಿ ಕೆಲಸಗಳನ್ನು ಮಾಡದಿರುವಾಗ್ಯೂ ಇನ್ನೊಬ್ಬರ ಮೇಲೆ ನೆಪ ಹೇಳಿ ದುರುದ್ದೇಶದಿಂದ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ಹೇಳುತ್ತೇನೆ. ರಾಜ್ಯಾಂಗದ 64ನೇ ತಿದ್ದುಪಡಿಗನುಗುಣವಾಗಿ ಇಲ್ಲಿ ತಿದ್ದುಪಡಿ ತರಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಪದೇ ಪದೇ ಹೇಳಿದ್ದಾರೆ. 64ನೇ ತಿದ್ದುಪಡಿ ರೀತ್ಯಾ ಜಿಲ್ಲಾ ಪರಿಷತ್ ಅಧ್ಯಕ್ಷರನ್ನು ತೆಗೆಯಬೇಕಾದರೆ ಮೂರನೇ ಎರಡು ಬಹುಮತ ಇದ್ದರೆ ಮಾತ್ರ ಸಾಧ್ಯವೆಂದು ಸ್ಪಷ್ಟವಾಗಿದೆ. ಅದಕ್ಕೆ ವ್ಯತಿರಿಕ್ತವಾಗಿ ಇದು ಗ್ರಾಮೀಣಾಭಿವೃದ್ಧಿ ಸಚಿವರು ತಿದ್ದುಪಡಿ ತಂದಿದ್ದಾರೆ. ಇದು 64ನೇ ತಿದ್ದುಪಡಿ ರೀತ್ಯಾ ಇದೆ ಎನ್ನುವುದು ಸರಿಯಿಲ್ಲ ಮತ್ತು ಅದರಲ್ಲಿ ಶಾಸಕರಿಗೆ ಜಿಲ್ಲಾ ಪರಿಷತ್ತಿನಲ್ಲಿ ಮತ ಕೊಡಲು ಅವಕಾಶ ಇಲ್ಲ, ಆದರೆ ಈ ಒಂದು ಕಾನೂನುನಲ್ಲಿ ಶಾಸಕರಿಗೆ

ಶ್ರೀ ಎಲ್.ಆರ್. ಶಿವರಾಮೇಗೌಡ : ನೀವು ಕನ್ನಡದ ಅಭಿಮಾನಿ ಎಂದು ಗೊತ್ತಾಗಿದೆ.. ಅದಕ್ಕೆ ಅವರು ಹೇಳುತ್ತಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಈ ಮಂಡಲಪಂಚಾಯತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಕೇವಲ ಎಕ್ಸಿಕ್ಯೂಟಿವ್ ಬಾಡೀಸ್ ಎಂದು ಹೇಳುತ್ತೇನೆ. ಅಭಿವೃದ್ಧಿ ಕಾರ್ಯವನ್ನು ಕಾರ್ಯಗತ ಮಾಡತಕ್ಕಂಥ ಸಂಸ್ಥೆಗಳಾಗಿರುತ್ತವೆ. ಅಲ್ಲಿ ಸಾರ್ವಭೌಮತ್ವ ಇರತಕ್ಕಂಥ ಮಾತು ಅದು ಅರ್ಥಹೀನ. ಗ್ರಾಮೀಣ ಪ್ರದೇಶದಲ್ಲಿ ಎರಡು ಮೂರು ಬಹುಮತ ಇದ್ದರೆ ಅಭಿವೃದ್ಧಿ ಕೆಲಸಕ್ಕೆ ಒಳಿತಾಗುತ್ತದೆ. ಅಧಿಕಾರ ದಾಹ ಕಚ್ಚಾಟ ತಪ್ಪಲಿಕ್ಕೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ. ಹಾಗಾದರೆ ಸಾರ್ವಭೌಮತ್ವದ ಮೂಲಕ ಈ ತಿದ್ದುಪಡಿಯನ್ನು ತಂದಿದ್ದರೆ ಶಾಸಕರಿಗೆ ಮತ್ತು ಪಾರ್ಲಿಮೆಂಟಿನ ಸದಸ್ಯರಿಗೆ ಇರತಕ್ಕಂಥ ಮತದಾನದ ಹಕ್ಕನ್ನು ಕಡಿಮೆ ಮಾಡಲಿಕ್ಕೆ ಏತಕ್ಕೆ ಈ ತಿದ್ದುಪಡಿ ತರಲಿಲ್ಲ. ರಾಜ್ಯಾಂಗದ 64ನೇ ತಿದ್ದುಪಡಿಯಲ್ಲಿ ಇದನ್ನು ಹೇಳುತ್ತಿದೆ. ಜಿಲ್ಲಾ ಪರಿಷತ್ತುಗಳಿಗೆ ಶಾಸಕರಿಗೆ ಮತ್ತು ಪಾರ್ಲಿಮೆಂಟಿನ ಸದಸ್ಯರಿಗೆ ಮತವನ್ನು ಕೊಡುವಂಥ ಅಧಿಕಾರ ಇರಕೂಡದು ಎಂದು ಹೇಳಿದೆ. ಆ ತಿದ್ದುಪಡಿಯನ್ನು ಸರ್ಕಾರ ಇದರಲ್ಲಿ ತರಲಿಲ್ಲ. ಕೇವಲ ಬೇರೆ ಪಕ್ಷದವರು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿರುವುದರಿಂದ ಅವರ ಅಧಿಕಾರವನ್ನು ಹರಣ ಮಾಡಬೇಕು. ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯದ ಹಿತದೃಷ್ಟಿಯನ್ನು ಕಡೆಗಣಿಸಿ, ರಾಜ್ಯದ ಅಭಿವೃದ್ಧಿಯನ್ನು ಕಡೆಗಣಿಸಿ, ಕೇವಲ ರಾಜಕೀಯ ಹಿತಾಸಕ್ತಿಗಾಗಿ ಬಳಸಿಕೊಳ್ಳುತಕ್ಕಂಥ ಈ ಕಾನೂನು ಈ ರಾಜ್ಯದ ಜನತೆಗೆ ದ್ರೋಹ ಮಾಡುವಂಥ ಕೆಲಸ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಮತ್ತು ಸನ್ಮಾನ್ಯ ಏಕಾಂತಯ್ಯನವರು ತಂದಿರತಕ್ಕಂಥ ನಿರ್ಣಯವನ್ನು ಬೆಂಬಲಿಸಿ ಸರ್ಕಾರದವರು ತಂದಿರತಕ್ಕಂಥ ಈ ತಿದ್ದುಪಡಿ ಜನರಿಗೆ ದ್ರೋಹ ಮಾಡತಕ್ಕಂಥದ್ದು, ಅಧಿಕಾರ ದಾಹಕ್ಕಾಗಿ ಮಾಡಿರತಕ್ಕಂಥದ್ದು ಇದು ಈ ಕಾಂಗ್ರೆಸ್‌ನ ನೀತಿಗೆ ಅನುಗುಣವಾಗಿದೆ. ಈ ಕಾಂಗ್ರೆಸ್‌ನ ಈ ನೀತಿಗೆ ಜನರು ಶೀಘ್ರದಲ್ಲಿ ರಾಜ್ಯದ ಜನ, ರಾಷ್ಟ್ರದ ಜನ ಬುದ್ದಿಯನ್ನು ಕಲಿಸದೇ ಇರಲಾರರು ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಹೇಳಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ಪಶುಸಂಗೋಪನೆ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈಗ....

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದಂಥ ಮಸೂದೆ ಮೇಲೆ ನಾವು ಚರ್ಚೆ ಮಾಡುತ್ತಿದ್ದೇವೆ. ಇದರ ಮುಖ್ಯತೆಯನ್ನು ದಮನ ಮಾಡಬೇಕು ಎನ್ನತಕ್ಕಂಥದ್ದು ನನ್ನ ದೃಷ್ಟಿ ಅಲ್ಲ. ಆದರೆ ಮಂತ್ರಿಗಳು ವಿವರಣೆಯನ್ನು ಕೊಡುತ್ತಾ ಎರಡು ಮಾತುಗಳನ್ನು ಹೇಳಿದರು. ಶಾಸನ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ತೆಗೆಯತಕ್ಕಂಥದ್ದು ಅಥವಾ ಇಟ್ಟುಕೊಳ್ಳತಕ್ಕಂಥ ನಿರ್ಣಯ ಸಾಮಾನ್ಯ ಬಹುಮತದಿಂದ ಆಗುತ್ತದೆ ಸಂಸತ್ತಿನಲ್ಲಿ ಸಾಮಾನ್ಯ ಬಹುಮತದಿಂದ ಆಗುತ್ತದೆ. ಆದ್ದರಿಂದ ಇದು ಜಿಲ್ಲಾ ಪರಿಷತ್ತಿಗೆ ಏತಕ್ಕೆ ಎಂದು ಹೇಳಿದರು. ನಾನು ಈಗಲೂ ಇವರಿಗೆ ಒಂದು ಸಲಹೆಯನ್ನು ಕೊಡುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿಯೂ ಮೂರನೇ ಎರಡು ಬಹುಮತ ಈಗ ಇರುವುದು ಸರಿಯಲ್ಲ ಎಂದು ಕಂಡರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಆದರೆ ಒಂದು ಕಂಡೀಷನ್. ಜಿಲ್ಲಾ ಪರಿಷತ್ತಿಗೆ ಯಾರು ಚುನಾವಣೆಯಿಂದ ಆಯ್ಕೆಯಾಗಿದ್ದಾರೋ, ಅವರಿಗಷ್ಟೇ ಮತದಾನವನ್ನು ಮಾಡತಕ್ಕಂಥ ಹಕ್ಕು ಇರುವುದಾದರೆ ನಿಮ್ಮ ಈ ತಿದ್ದುಪಡಿಗೆ ನಮ್ಮ ಅಭ್ಯಂತರವೇನೂ ಇಲ್ಲ. ಶಾಸನಸಭೆಯೊಳಗಾಗಲೀ ಸಂಸತ್ತಿನಲ್ಲಾಗಲೀ ಶಾಸನ ಸಬೆಗೆ ಆಯ್ಕೆಯಾದಂಥ ಸದಸ್ಯರು ಮಾತ್ರ ನಾಯಕರು ಯಾರು ಎಂದು

ತೀರ್ಮಾನವನ್ನು ಮಾಡುತ್ತಾರೆ. ಸಂಸತ್ತಿನಲ್ಲಿಯೂ ಕೂಡಾ ಪ್ರಧಾನ ಮಂತ್ರಿಗಳು ಯಾರು ಆಗಬೇಕು ಎನ್ನುವುದನ್ನು ತೀರ್ಮಾನ ಮಾಡತಕ್ಕಂಥವರು ಸಂಸತ್ತಿಗೆ ಆಯ್ಕೆ ಆದಂಥವರು ಮಾತ್ರ ಮಾಡುತ್ತಾರೆ.

ಆದರೆ ಜಿಲ್ಲಾ ಪರಿಷತ್ತಿನಲ್ಲಿ ವಿಶೇಷವಾಗಿ ಜಿಲ್ಲಾ ಪರಿಷತ್ತಿಗೆ ಆಯ್ಕೆಯಾಗದೆ ಇರತಕ್ಕ ಶಾಸಕರು ಶಾಸನಸಭೆಯ ವಿಧಾನ ಪರಿಷತ್ತಿನ ಮತ್ತು ಸಂಸತ್ತಿನ ಸದಸ್ಯರೂ ಕೂಡ ಅದರಲ್ಲಿ ಪಾಲ್ಗೊಳ್ಳುತ್ತಾರೆ. ಅವರು ಜನತಂತ್ರದ ವ್ಯವಸ್ಥೆಯಲ್ಲಿ ಹೊರಗಿರಬೇಕೆನ್ನುವ ನನ್ನ ಇಚ್ಛೆ ಅಲ್ಲ. ಎಲ್ಲಾ ಅಧಿಕಾರದಲ್ಲಿ ಅವರು ಪಾಲುದಾರರಾಗಲಿ, ಆದರೆ ಚುನಾವಣೆ ಮಾಡತಕ್ಕ ವಿಷಯದಲ್ಲಿ ಅವರಿಗೆ ಮತದಾನದ ಹಕ್ಕನ್ನು ಕೊಡುವುದಕ್ಕೆ ಸಿದ್ಧವಿಲ್ಲವೆನ್ನುವುದಾದರೆ ನೀವು ಹೇಳಿದ ತೀರ್ಮಾನಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಈ ಮತದಾನದ ಹಕ್ಕನ್ನು ಇಟ್ಟುಕೊಂಡು ನೀವು ಸಿಂಪಲ್ ಮೇಜಾರಿಟಿ ಅನ್ನುವಂತಹ ಈ ಮಸೂದೆ ಏನು ತಂದಿದ್ದೀರಿ, ಅದಕ್ಕೆ ಅಫಿಶಿಯಲ್ ಇವರು ರೆಜಲ್ಯೂಶನ್ ಏನು ತಂದಿದ್ದಾರೆ, ಅವೆರಡಕ್ಕೂ ಎಲ್ಲಾದರೂ ಒಂದು ಕಡೆ ನಾವು ಪರಿಹಾರ ಕಂಡು ಹಿಡಿಯಬೇಕೆಂದು ನಿಮಗೂ ಆಸಕ್ತಿ ಇದ್ದರೆ ಆ ಕೆಲಸ ಮಾಡಬಹುದು. ಈ ಕೆಲಸ ಮಾಡುವಾಗ ನಾನು ತಮ್ಮನ್ನು ಅಷ್ಟೇ ಕುರಿತು ಹೇಳುತ್ತಿಲ್ಲ. ತಮ್ಮ ಜೊತೆಗೂ ಚರ್ಚೆ ಮಾಡಿದ್ದೇವೆ. ನಿಮ್ಮ ಹಿಂದೆ ಈ ಖಾತೆಯನ್ನು ವಹಿಸಿಕೊಂಡಿದ್ದ ಘೋರ್ಪಡೆ ಅವರ ಜೊತೆಗೂ ಚರ್ಚೆ ಮಾಡಿದ್ದೇವೆ. ಮತ್ತು ಮುಖ್ಯ ಮಂತ್ರಿಗಳ ಜೊತೆಗೂ ಚರ್ಚೆ ಮಾಡಿದ್ದೇವೆ.

ಹಿಂದೆ ನಾವು ಖಾಸಗಿಯಾಗಿ ಆಡಿದ ಮಾತನ್ನು ಶಾಸನಸಭೆಯಲ್ಲಿ ಹೇಳಬೇಕೋ ಬೇಡವೋ ಎಂದು ನಾನು ಸುಮ್ಮನೆ ಇದ್ದೆ. ಖಾಸಗಿಯಾದರೂ ಕೂಡ ಇದು ಇನ್ ಪ್ರಿನ್ಸಿಪಲ್ ನೀವು ಹೇಳತಕ್ಕದ್ದು ಒಪ್ಪತಕ್ಕ ಮಾತು ಎಂದು ಹೇಳಿ ತಮ್ಮ ಹಿಂದೆ ಈ ಖಾತೆಯನ್ನು ನಿರ್ವಹಿಸುತ್ತಾ ಇದ್ದಂತಹ ಮಾನ್ಯ ಘೋರ್ಪಡೆಯವರು ಒಪ್ಪಿಕೊಂಡಿದ್ದರು ಎನ್ನುವುದನ್ನು ಸಭೆಯ ಗಮನಕ್ಕೆ ತರುತ್ತೇನೆ. ಅವರು ಡಿನೈ ಮಾಡುವುದಿಲ್ಲ ಅಂತ ಹೇಳಿದರು, ಆದ್ದರಿಂದ ಈ ಒಪ್ಪಂದಕ್ಕೆ ಬರುವುದಾದರೆ ಎಲ್ಲರೂ ಯುನಾನಿಮಸ್ ಆಗಿ ಪಾಸ್ ಮಾಡೋಣ, ಇದಕ್ಕೆ ಏಕೆ ಇಷ್ಟೊಂದು ಚರ್ಚೆ. ಆದಕ್ಕೆ ನಾವು ಸಿದ್ಧರಿಲ್ಲ, ನಾವು ನಮ್ಮ ಹೊರಗಿನ ಶಕ್ತಿಯನ್ನು ಬಳಸಿ ಅಧಿಕಾರ ತೆಗೆದುಕೊಳ್ಳುತ್ತೇವೆ ಎನ್ನತಕ್ಕ ನಿಮ್ಮ ಪ್ರಯತ್ನ ಏನಿದೆ, ಇದು ಸಾಧುವಾದುದಲ್ಲ. ಯಾವ್ಯಾವ ಹಂತದಲ್ಲಿ ಯಾರ್‍ಯಾರು ಕೆಲಸ ಮಾಡಬೇಕು ಅವರು ಮಾಡಲಿ, in the best interest of the institutions and in the better wisdom prevailing at that point of time, ಈ ಒಂದು ಸ್ಥಳೀಯ ಸಂಸ್ಥೆಗಳಿಗೆ ಅದು ಕಾರ್ಪೊರೇಷನ್ ಇರಬಹುದು, ಅಥವಾ ನಮ್ಮ ಸಹಕಾರ ಸಂಸ್ಥೆಗಳು ಇರಬಹುದು ಇಲ್ಲವೇ ಪುರಸಭೆಗಳು ಇರಬಹುದು, ಇಂತಹ ಕಡೆಗಳಲ್ಲಿ ಮೂರನೆ ಎರಡು ಭಾಗ ಇರತಕ್ಕದ್ದನ್ನು ಮಾಡಿ. ಹಾಗೆಯೇ ಮುಂಡಲ್ ನಲ್ಲಿಯೂ ಕೊಡ ಕೆಲಸ ಚೆನ್ನಾಗಿ ಆಗಬೇಕು. ಇದು ಒಂದು ಭಾಗ. ಎರಡನೆಯದು ಈ ಸರ್ಕಾರ ಬಂದ ಮೇಲೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಅದಕ್ಕೆ ಅನುವು ಮಾಡಿಕ್ಕೊಟ್ಟಿಲ್ಲ ಎಂದು ಹೇಳಿದ್ದರೆ ಅಂತಹ ತೊಂದರೆಗಳು ನಮ್ಮ ಪಕ್ಷದಿಂದ ಏನಾದರೂ ಬಂದಿದ್ದರೆ ಖಂಡಿತ ಅದನ್ನು ಸರಿಪಡಿಸಬಹುದು. ಏಕೆಂದರೆ ಪ್ರತಿಯೊಂದು ಸ್ಥಳೀಯ ಸಂಸ್ಥೆಗಳು ಅದರಲ್ಲಿಯೂ ವಿಶೇಷವಾಗಿ ಜಿಲ್ಲಾ ಪರಿಷತ್ತುಗಳು ಮತ್ತು ಮಂಡಲ ಪಂಚಾಯತಿಗಳು they are not the policy making bodies. They are implementing agencies.

ಯಾವ್ಯಾವ ಇಲಾಖೆಯಲ್ಲಿ ಅವರು ಇಂಪ್ಲಿಮೆಂಟ್ ಮಾಡಬಹುದು ಅನ್ನತಕ್ಕ ಒಂದು ಏಜೆನ್ಸಿಯನ್ನು ಫಿಕ್ಸ್ ಮಾಡಿದ್ದರು. ಅಲ್ಲಿ ಅಭಿವೃದ್ಧಿ ಕಾರ್ಯಕ್ಕೆ ತೊಂದರೆ ಆಗುತ್ತಿದೆ ಎಂದು ಕಂಡರೆ ನಾವು ನಮ್ಮ ಕೈಲಾದ ಸಹಾಯ ಮಾಡಬಹುದು.

ಅಂಥಾದ್ದನ್ನು ತಾವು ಒಂದನ್ನೂ ನಮ್ಮ ಗಮನಕ್ಕೆ ತರುವುದಿಲ್ಲ. ಇರತಕ್ಕ ವ್ಯವಸ್ಥೆಯಲ್ಲಿ ಬಲಪಡಿಸುವುದನ್ನು ಬಿಟ್ಟು ನೀವು ಪ್ರಾರಂಭದಿಂದ ಜಗಳವನ್ನು ಶುರು ಮಾಡಿದ್ದೀರಿ, ಸರ್ಕ್ಯುಲರ್‌ಗಳನ್ನು ಕಳುಹಿಸುವುದು, ಉಪಾಧ್ಯಾಯರುಗಳನ್ನು ಅಪಾಯಿಂಟ್ ಮಾಡಬೇಡಿ., ಶಾಲೆಗಳನ್ನು ಕೊಡಬೇಡಿ, ಈ ಇಲಾಖೆಯಲ್ಲಿ ಈ ಕೆಲಸ ಮಾಡು ಆ ಇಲಾಖೆಯಲ್ಲಿ ಆ ಕೆಲಸ ಮಾಡು ಎಂದು ಹೇಳುತ್ತೀರಿ, ಅದಕ್ಕಾಗಿ ನಾನು ತಮ್ಮ ಗಮನಕ್ಕೆ ತಂದೆ. ರಾಜ್ಯಾಂಗದ 282 ಮತ್ತು ರಾಜ್ಯಾಂಗದ 256ನೆ ವಿಧಿ, 282ನೇ ವಿಧಿಯಿಂದ ಸಂಸತ್ತು ಅಥವಾ ಪ್ರಧಾನಮಂತ್ರಿ ಮತ್ತು ಮುಖ್ಯಮಂತ್ರಿ ತಮ್ಮ ಪಕ್ಷ ಅಥವಾ ತಮ್ಮ ಸೀಮಿತ ವ್ಯವಸ್ಥೆಯೊಳಗೆ ಸಂಸತ್ತಿನ ಅಥವಾ ಶಾಸನಸಭೆಯ ಒಪ್ಪಿಗೆ ಇಲ್ಲದೆ ಕೆಲವು ಭಾಗಗಳನ್ನು ಏನು ವಿತರಣೆ ಮಾಡಬೇಕೆಂದು ಹೇಳಿ ಹಣ ನಿಗಧಿ ಮಾಡುತ್ತಾರೆ. ಆ ಹಣ ನಿಗಧಿ ಮಾಡುವಾಗ 256ನೇ ವಿಧಿಯಲ್ಲಿ ಒಂದು ನಿರ್ದೇಶನ ಮಾರ್ಗದರ್ಶನ ಕೊಡುತ್ತಾರೆ. ಆ ಡೈರೆಕ್ಟೀವ್‌ನ್ನು ಬಿಟ್ಟು ಕೆಲಸ ಮಾಡತಕ್ಕ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಈ ಜಗಳ ಶುರುವಾಯಿತು. ನಿರ್ದೇಶನ 256ರಲ್ಲಿ ಸೆಂಟ್ರಲ್ ಗೌರ್ನ್‌ಮೆಂಟ್ ಏನು ಪ್ರತಿವರ್ಷ • ಜವಾಹರ್ ರೋಜ್‌ಗಾರ್ ಯೋಜನೆಗೆ ಒಂದು ಆದೇಶವನ್ನು ಕಳುಹಿಸಿತ್ತು. ಅದನ್ನು ನೀವು ಪಾಲನೆ ಮಾಡಿಕೊಂಡು ಈ ಕೆಲಸವನ್ನು ಮಾಡಿ ಎಂದು ಹೇಳಿದ್ದರೆ ಅವರು ವಿರೋಧ ಮಾಡುತ್ತಿದ್ದರು ಎಂದು ನಾನು ಅಂದುಕೊಂಡಿಲ್ಲ. ಅದಕ್ಕೆ ಈಗಲೂ ಸಮಯ ಮಿಂಚಿಲ್ಲ. ಅದಕ್ಕಾಗಿ ನಿಮ್ಮ ಕೆಲಸ ನೀವು ಮಾಡಿ, ಅಂತ ಹೇಳೋಣ, ಎಲ್ಲಿ ತಪ್ಪುತ್ತಾರೆ, ಅಲ್ಲಿ ಎಲ್ಲರೂ ಒಟ್ಟಿಗೆ ಸೇರಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ. ಈ ಸಲಹೆಯನ್ನು ನೀವು ಆಲೋಚನೆ ಮಾಡಬೇಕೆಂದು ಹೇಳಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ ವಿರೋಧ ಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು ಏನು ಈ ಸಭೆಯ ಮುಂದೆ ಸಲಹೆಯನ್ನು ಇಟ್ಟಿದ್ದಾರೆ. ಆ ಸಲಹೆ ನಂತರ ಪರಿಶೀಲನೆ ಮಾಡಲಿಕ್ಕೆ ಯೋಗ್ಯವಾಗಿದೆ.

ಈಗ 167ನೇ ಸೆಕ್ಷನ್‌ನಲ್ಲಿರತಕ್ಕಂತಾದ್ದು ನಾವು ಮಾಡಿದ್ದು ಅಲ್ಲ. ಹಳೆಯ ವಿಧಿ ಏನಿತ್ತು, ಹಳೆಯ ವಿಧಿಗೆ ನಾವು ಇದನ್ನು ತಿದ್ದುಪಡಿ ತಂದಿದ್ದೇವೆ ಹೊರತಾಗಿ ಬೇರೆ ಅಲ್ಲ. ಆದ್ದರಿಂದ, ಮುಂದೆ ಬರತಕ್ಕಂಥ ಸಮಗ್ರವಾದಂಥ ತಿದ್ದುಪಡಿಯನ್ನು ಏನು ನಾವು ತರುತ್ತಿದ್ದೇವೆ ಅದು ಬಂದಾಗ ನಾವು ಆಲೋಚನೆ ಮಾಡೋಣ. ಈಗ ಶ್ರೀಮಾನ್- ಏಕಾಂತಯ್ಯನವರು ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. 62ನೇ ರಾಜ್ಯಂಗ ತಿದ್ದುಪಡಿ ಬಗ್ಗೆ ಒಂದು ವಿಚಾರ ಎತ್ತಿದ್ದಾರೆ. ನಾವು ಒಂದು ನಿರ್ಧಾರಕ್ಕೆ ಬಂದಿದ್ದೇವೆ. ಅದು ಇನ್ನೂ ಕಾನೂನು ಆಗಿಲ್ಲ. ಅದು ಕಾನೂನು ಆಗಿದ್ದರೆ ಅದು ರಾಜ್ಯಾಂಗಕ್ಕೆ ತಿದ್ದುಪಡಿ ಆಗುತ್ತದೆ. ಅದರಲ್ಲಿ ಅಳವಡಿಸಿರತಕ್ಕಂಥ ಪ್ರತಿಯೊಂದು ಕೂಡಾ ನಮಗೆ ಆದೇಶ ಆಯಿತು. ಕಾನ್‌ಸ್ಟಿಟ್ಯೂಷನ್ ಆಯಿತು. ಅದರಂತೆ ನಾವು ನಡೆದುಕೊಳ್ಳಲೇಬೇಕಾಗುತ್ತದೆ. ನಮಗೆ ಬೇರೆ ಮಾರ್ಗವೇ ಇಲ್ಲ. ಆದರೆ ಅದು ಕಾನೂನು ಆಗಿಲ್ಲ. ಆದ್ದರಿಂದ ಅದರಲ್ಲಿರತಕ್ಕಂಥ ತತ್ವಗಳು ಏನಿವೆ ಆ ತತ್ವಗಳನ್ನು ನಾವು ನಿರೂಪಣೆ ಮಾಡುವಾಗ ....

(ಗೊಂದಲ)

ಆದ್ದರಿಂದ ತಾವು ಏನು ರೆಸಲ್ಯೂಷನ್ ತೆಗೆದುಕೊಂಡು ಬಂದಿದ್ದೀರಿ, ಇದು ರಾಜ್ಯಾಂಗದ ಕಲಮ್ 213ರ ಪ್ರಕಾರ ಸರಿ ಹೋಗುವುದಿಲ್ಲ. ಆದ್ದರಿಂದ ಅದನ್ನು ಈ ಸಭೆ ತಿರಸ್ಕರಿಸಲೇಬೇಕಾಗುತ್ತದೆ. ಈಗ ನಾನು ತಮ್ಮ ಮುಂದೆ ತಿದ್ದುಪಡಿ ಇಟ್ಟಿದ್ದೇನೆ. ತಾವು ಸಲಹೆಗಳನ್ನು ಈ ಬಗ್ಗೆ ಕೊಟ್ಟಿದ್ದೀರಿ. ನಾನು ಒಂದು ಬಹಳ ಸಣ್ಣ ತಿದ್ದುಪಡಿಯನ್ನು ತಂದಿದ್ದೇನೆ. ಆದ್ದರಿಂದ ಈ ಸಭೆಯಲ್ಲಿರತಕ್ಕ ತಾವು

ಪ್ರತಿಯೊಬ್ಬರೂ ಕೂಡ ನನ್ನ ತಿದ್ದುಪಡಿ ಮಸೂದೆಯನ್ನು ಅನುಮೋದಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಈಗ ಮಾನ್ಯ ಶ್ರೀ ಏಕಾಂತಯ್ಯನವರು ತಾವು ಮಂಡಿಸಿದ ಶಾಸನಬದ್ಧ ನಿರ್ಣಯವನ್ನು ವಾಪಸ್ ಪಡೆಯುತ್ತೀರಾ?

ಶ್ರೀ ಹೆಚ್.ಏಕಾಂತಯ್ಯ : ಇಲ್ಲ

ಛೇರ್ಮನ್ : ಹಾಗಿದ್ದರೆ ಮಾನ್ಯ ಏಕಾಂತಯ್ಯನವರು ಮಂಡಿಸಿದ ಶಾಸನ ಬದ್ಧ ನಿರ್ಣಯವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಏನೆಂದರೆ,

"ರಾಜ್ಯಪಾಲರು 1ನೇ ಫೆಬ್ರವರಿ 1991 ರಂದು ಘೋಷಿಸಿದ 1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳ, ತಾಲ್ಲೂಕು ಪಂಚಾಯಿತಿ ಸಮಿತಿಗಳ, ಮಂಡಲ ಪಂಚಾಯತಿಗಳ ಹಾಗೂ ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ಆಧ್ಯಾದೇಶವನ್ನು (1991ರ ಆಧ್ಯಾದೇಶ ಸಂಖ್ಯೆ-2) ಈ ಸದನವು ಅನುಮೋದಿಸುತ್ತದೆ."

ಈ ಪ್ರಸ್ತಾವದ ನಿರ್ಣಯ "ಇಲ್ಲ" ಎನ್ನುವವರ ಪರವಾಗಿದೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಅಧ್ಯಕ್ಷರೆ, ಮತ ಎಣಿಕೆಯಾಗಬೇಕು.

(ಈ ಹಂತದಲ್ಲಿ ವಿರೋಧಪಕ್ಷದವರಿಂದ ಹೌದು ಎನ್ನುವವರ ಪರವಾಗಿದೆ ಎಂದು ಘೋಷಣೆ)

ಶ್ರೀ ಹೆಚ್. ಏಕಾಂತಯ್ಯ: ಅಧ್ಯಕ್ಷರೆ, ಈಗ 187 ಜನ ಸದಸ್ಯರಲ್ಲಿ ಎಷ್ಟು ಜನ ಇದ್ದಾರೆ ನೋಡೋಣ, ಆದ್ದರಿಂದ, ಮತ ಎಣಿಕೆ ಆಗಬೇಕು.

(ಗೊಂದಲ)

ಛೇರ್ಮನ್: ಮಾನ್ಯ ಮಂತ್ರಿಗಳು ಪರ್ಯಾಲೋಚನ ಪ್ರಸ್ತಾವರ ಬಗ್ಗೆ ಮೂವ್ ಮಾಡತಕ್ಕದ್ದು.

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಅಧ್ಯಕ್ಷರೆ,...

ಛೇರ್ಮನ್: ಪ್ರಸ್ತಾವ ಬಿದ್ದು ಹೋಗಿದೆ. ಧ್ವನಿ ಮತದ ಮೂಲಕ ಬಿದ್ದುಹೋಗಿದೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಅಧ್ಯಕ್ಷರೆ, ನಾವು ಒಪ್ಪುವುದಿಲ್ಲ. ಪರ ಮತ್ತು ವಿರೋಧದ ಬಗ್ಗೆ ಮತಗಳ ಎಣಿಕೆಯಾಗಬೇಕು.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಅಧ್ಯಕ್ಷರೆ, ಪ್ರಸ್ತಾವವನ್ನು ಮತಕ್ಕೆ ಹಾಕಿದಾಗಲೇ ಅವರು ಡಿವಿಜನ್‌ಗೆ ಪ್ರೆಸ್‌ಮಾಡಬೇಕಾಗಿತ್ತು.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಸದಸ್ಯರ ವಾದ ಏನಿದೆ, ಈ ಬಗ್ಗೆ ಮಾನ್ಯ ಅಧ್ಯಕ್ಷರು ತಮ್ಮ ತೀರ್ಮಾನವನ್ನು ಕೊಟ್ಟಮೇಲೆ ಅವರು ಕೇಳುತ್ತಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ: ತಾವು ಅರ್ಥಮಾಡಿಕೊಳ್ಳಬೇಕು. 2ನೇ ಸಾರಿ ಏನೂ ವ್ಯತ್ಯಾಸವಾಗುವುದಿಲ್ಲ...

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ತಾವು ರೂಲಿಂಗ್ ಕೊಡಬೇಕು...

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ತಾವು ಯಾವಾಗ ಎರಡನೇ ಸಾರಿ ಪರವಾಗಿರುವವರು....

(ಗೊಂದಲ)

ಶ್ರೀ ಎ.ಬಿ. ಜಕನೂರು: ಏನು ವ್ಯತ್ಯಾಸವಾಗಿದೆ? ಏತಕ್ಕೆ ಇಷ್ಟು ಗಲಾಟೆ ಮಾಡುತ್ತಿದ್ದೀರಿ?

(ಗೊಂದಲ)

ಛೇರ್ಮನ್: ಪ್ರಸ್ತಾಪ ಬಿದ್ದು ಹೋಯಿತು ಎಂದು ಹೇಳಿದ ಮೇಲೆ ಇವರು ಡಿವಿಜನ್‌ಗೆ ಪ್ರೆಸ್ ಮಾಡಿದ್ದುದು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ: ಏನೂ ಮಾಡುವುದಕ್ಕಾಗುವುದಿಲ್ಲ. ಮತ್ತೆ ಎಲೆಕ್ಷನ್ ಆದರೆ 12 ಜನ ಬರುತ್ತೀರಿ ಅಷ್ಟೇ ನೀವು.

(ಗೊಂದಲ)

ಛೇರ್ಮನ್: ಈಗ ಕಾನೂನು ಪ್ರಕಾರ ರೆಕಾರ್ಡ್ ಕೂಡ ಆಗಿಹೋಗಿದೆ. ಈಗ ಏನೂ ಮಾಡಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ತಮಗೆ ಎಲ್ಲ ಗೌರವವನ್ನೂ ಕೊಡುತ್ತೇವೆ. ಬಿದ್ದು ಹೋಗಿದೆ ಎಂದು ಹೇಳುವುದಕ್ಕೆ ಮುಂಚಿತವಾಗಿ ನಾನು ಡಿವಿಜನ್‌ಗೆ ಪ್ರೆಸ್ ಮಾಡಿದ್ದುದು.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ತಾವು ರೂಲಿಂಗ್ ಕೊಡಬೇಕು, ಅಧ್ಯಕ್ಷರೆ....

(ಗೊಂದಲ)

ಛೇರ್ಮನ್: ಪ್ರಸ್ತಾಪ ಬಿದ್ದು ಹೋಯಿತು ಎಂದು ಹೇಳಿದಂಥಾದ್ದು ರೆಕಾರ್ಡ್‌ಗೆ ಹೋದ ಮೇಲೆ ನಿಮ್ಮದು ಬಂದಿದ್ದು. ಈಗ ಏನೂ ಮಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಬಂದರು.)

ಅಧ್ಯಕ್ಷರು: ಆರ್ಡರ್, ಆರ್ಡರ್, ಆಗಬಹುದು, ಆಗಬಹುದು...

(ಗೊಂದಲ)

ಅಧ್ಯಕ್ಷರು: ನಾಗಮಾರಪಲ್ಲಿಯವರೇ ದಯವಿಟ್ಟು ಕುಳಿತುಕೊಳ್ಳಿ, ಸಮಾಧಾನದಿಂದ ಎಲ್ಲವನ್ನೂ ಬಗೆಹರಿಸಿಕೊಳ್ಳಬಹುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಇವರು ಡಿವಿಜನ್‌ಗೋಸ್ಕರ ಪ್ರೆಸ್ ಮಾಡುತ್ತಿದ್ದಾರೆ. ಇಲ್ಲ ಇದು ಪಾಸ್ ಆದಮೇಲೆ.

ಶ್ರೀ ಎಚ್. ಏಕಾಂತಯ್ಯ: ಇಲ್ಲ....

(ಗೊಂದಲ)

ಅಧ್ಯಕ್ಷರು: ಯಾರಾದರೂ ಒಬ್ಬರು ಹೇಳಿದರೆ ಸಾಕು. ಈಗ ಅವರು ಒಬ್ಬರು ಏನೋ ಹೇಳಿದ್ದಾರೆ. ಅದಕ್ಕೆ ಯಾರಾದರೂ ಒಬ್ಬರು ಉತ್ತರ ಕೊಡಬಹುದಲ್ಲ.

ಶ್ರೀ ಹೆಚ್. ಏಕಾಂತಯ್ಯ: ಮಾನ್ಯ ಅಧ್ಯಕ್ಷರೆ, ಈ ಶಾಸನಬದ್ಧವಾದ ನಿರ್ಣಯದ ಮೇಲೆ ಮತದಾನ ಆಗತಕ್ಕ ಸಂದರ್ಭದಲ್ಲಿ ಆದಂಥ ಘಟನೆ. ಇದು ಇಲ್ಲ ಆದಂಥ ಘಟನೆ ಏನೆಂದರೆ ಇಲ್ಲಿ ನಾವು ಮಾತನಾಡಿದ್ದೆಲ್ಲಾ ರೆಕಾರ್ಡ್‌ಗೆ ಹೋಗಿದೆ. ನಾವು ಹೇಳುವುದರಲ್ಲಿ ಏನಾದರೂ ತಪ್ಪಿದರೆ ಈಗಾಗಲೇ ರೆಕಾರ್ಡ್ ಆಗಿರತಕ್ಕ ನಡವಳಿಕೆಗಳನ್ನು ತರಿಸಿ ತಾವು ನೋಡಬಹುದು. ಅವರದ್ದು ಸರಿಯೇ ಅಥವಾ ನಮ್ಮದು ಸರಿಯೇ ಎಂದು ಅಂತಿಮವಾಗಿ ತೀರ್ಮಾನ ಮಾಡುವುದು ತಮಗೆ ಸೇರಿದ್ದು ಈ ನಿರ್ಣಯವನ್ನು ಮತಕ್ಕೆ ಹಾಕತಕ್ಕ ಸಂದರ್ಭದಲ್ಲಿ I pressed for division at the appropriate time. Without taking note of it, the Hon'ble Chairman said that the resolution is rejected. Then I took strong objection for not having taken action against my insistence for division. That is the point.

ನಾನು ತಮ್ಮಲ್ಲಿ ಕೇಳುವುದು ಇಷ್ಟೇ. ಯಾವಾಗ ಆ ಸಮಯದಲ್ಲಿ ನಾನು ಮತವನ್ನು ಡಿವಿಜನ್‌ಗೆ ಪ್ರೆಸ್ ಮಾಡಿದೆನೋ ಆವಾಗ ಅವರು ಈ ನಿರ್ಣಯವನ್ನು ಮತಕ್ಕೆ ಹಾಕಬೇಕಾಗಿತ್ತು. ಅಷ್ಟೇ ನಮ್ಮ ಬೇಡಿಕೆ.

ಅಧ್ಯಕ್ಷರು: ಶ್ರೀ ಕಾಗೋದ್ ತಿಮ್ಮಪ್ಪನವರು ಏನೋ ಹೇಳುತ್ತಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಮಾನ್ಯ ಅಧ್ಯಕ್ಷರೇ, ಇದನ್ನು ಮತಕ್ಕೆ ಹಾಕುವುದಕ್ಕೆ ಮೊದಲು ಅವರು ಪ್ರೆಸ್ ಮಾಡಬೇಕಾಗಿತ್ತು. ಅವರು ಎಲ್ಲಾ ಪಾಸ್ ಆದಮೇಲೆ ಪ್ರೆಸ್ ಫಾರ್ ಡಿವಿಜನ್ ಎಂದು ಕೇಳಿದರು. ಈ ಬಗ್ಗೆ ರೂಲಿಂಗ್ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ: ಎಸ್. ಅಂಡ್ ನೋ ಎಂದು ಹೇಳಿದ ಮೇಲೆ ಐ ಪ್ರೆಸ್ ಫಾರ್ ಡಿವಿಜನ್. ಅವರು ಅದಕ್ಕಿಂತ ಮೊದಲೇ ನಾನು ಹೇಳಬೇಕಾಗಿತ್ತು ಎಂದು ಹೇಳುತ್ತಾರೆ. ಇದು ನನಗೆ ಅರ್ಥವಾಗಲಿಲ್ಲ.

ಅಧ್ಯಕ್ಷರು: ಮೊದಲೇ ಹೇಳುವುದಕ್ಕೆ ಬರುವುದಿಲ್ಲ.

(ಗೊಂದಲ)

MR. SPEAKER: I take strong objection to this kind of behaviour. Sri Ekanthaiah was heard with attention and respect. I expect you to kindly reciprocate the same.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ ಅವರು ಡಿವಿಜನ್ ಪ್ರೆಸ್ ಮಾಡುವುದಕ್ಕೆ ಅಧಿಕಾರವಿದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ಯಾವ ಹಂತದಲ್ಲಿ ಮಾಡಬೇಕೆಂದರೆ, ತಾವು ಮತಕ್ಕೆ ಅಂದರೆ ಧ್ವನಿ ಮತಕ್ಕೆ ಹಾಕಿ ಧ್ವನಿ ಮತದಿಂದ ಪಾಸ್ ಆಗುವುದಕ್ಕೆ ಮುಂಚೆ ನಾವು ಡಿವಿಜನ್‌ಗೆ ಪ್ರೆಸ್ ಮಾಡಿದ್ದೇವೆಂದು ಹೇಳಿಬಿಟ್ಟರೆ, ಆಗ ನೀವು ಧ್ವನಿ ಮತಕ್ಕೆ ಹಾಕುವುದಕ್ಕೆ ಮುಂಚೆ ಡಿವಿಜನ್‌ಗೆ ಕಾಲ್‌ಫಾರ್ ಮಾಡಬೇಕಾಗುತ್ತದೆ. ಇಲ್ಲಿ ಏನು ಆಗಿದೆ ಅಂದರೆ ಧ್ವನಿ ಮತಕ್ಕೆ ಹಾಕಿ ಇದು ಪಾಸ್ ಆಗಿದೆ ಎಂದು ಡಿಕ್ಲೇರ್ ಆಗಿದೆ.

(ಗೊಂದಲ)

ಅವರ ಸೂಚನೆಯನ್ನು ಧ್ವನಿ ಮತಕ್ಕೆ ಹಾಕಿದಾಗ ಅದು ಬಿದ್ದುಹೋಗಿದೆ. ಇದು ಮಾಡುವುದಕ್ಕೆ ಮುಂಚೆ ಡಿವಿಜನ್‌ಗೆ ಪ್ರೆಸ್ ಮಾಡುವುದಕ್ಕೆ ಅವರಿಗೆ ಅವಕಾಶವಿತ್ತು. ಆದರೆ ಡಿಕ್ಲೇರ್ ಮಾಡಿದ ಮೇಲೆ ಈವಾಗ ಡಿವಿಜನ್‌ಗೆ ಪ್ರೆಸ್ ಮಾಡುವುದಕ್ಕೆ ಅಧಿಕಾರ ಎಲ್ಲಿದೆ. ನಿಯಮಾವಳಿ ಪ್ರಕಾರ ಇದ್ದರೆ ತೋರಿಸಲಿ ಹಂತದಲ್ಲಿ ಮಾಡಲಿಕ್ಕೆ ಅವಕಾಶ ಇದ್ದರೆ ತೋರಿಸಲಿ.

ಶ್ರೀ ಹೆಚ್. ಏಕಾಂತಯ್ಯ: ನಾನು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ಮಾತನ್ನು ಒಪ್ಪುತ್ತೇನೆ. ನಾನು ಐ ಪ್ರೆಸ್ ಫಾರ್ ದಿ ಡಿವಿಜನ್ ಎಂದು ಹೇಳಿದ್ದು, ಸನ್ಮಾನ್ಯ ಸಭಾಧ್ಯಕ್ಷರು ನನ್ನ ನಿರ್ಣಯ ತಿರಸ್ಕೃತ ಆಗಿದೆ ಎಂದು ಹೇಳುವುದಕ್ಕಿಂತ ಮೊದಲು. ಅದನ್ನು I will take challenge against Mr. Kagodu Thimmappa. ರೆಕಾರ್ಡ್‌ನಲ್ಲಿ ಈ ವರ್ಷ ಏನಿದೆ. ಅದನ್ನು ನೋಡಿ ತಾವು ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ. ಅದು ಇಲ್ಲದಿದ್ದರೆ ತಾವು ಏನು ಹೇಳುತ್ತೀರಿ? ಸನ್ಮಾನ್ಯ ಕಾಗೋಡು ತಿಮ್ಮಪ್ಪನವರೇ ತಾವು ನನಗಿಂತ ಹಿರಿಯ ಸದಸ್ಯರು. ಯಾವಾಗ ಪ್ರೆಸ್ ಫಾರ್ ಡಿವಿಜನ್ ಎಂದು ಹೇಳುವಷ್ಟು ನನಗೆ ಅರ್ಥವಾಗುವುದಿಲ್ಲವೇ? ಅವರು ಹೇಳುವುದಕ್ಕೆ ಮುಂಚೆಯೇ ನಾನು ಹೇಳಿದೆ.

(ಗೊಂದಲ)

ಅಧ್ಯಕ್ಷರು: ಈಗ ಈ ಸದನವನ್ನು ನಮ್ಮ ರೂಲ್ಸ್ ಮತ್ತು ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಅಫ್ ಪಾರ್ಲಿಮೆಂಟ್, ಕೌಲ್ ಅಂಡ್ ಶಕ್‌ದರ್ ಚೌಕಟ್ಟಿನಲ್ಲಿ ನಡೆಸೋಣ. ಇದಕ್ಕೆ ತಮ್ಮ ಒಪ್ಪಿಗೆ ಇದೆ ಎಂದು ' ನಾನು ತಿಳಿದುಕೊಂಡಿದ್ದೇನೆ. Debate: When the debate on a motion concludes the debate is concluded. The Speaker puts the question and invites those who are in favour of the motion to say 'Yes' and those against the motion to say 'No'.

Then the Speaker says, I think 'Yes' have it. If the opinion of the Speaker as to the decision on a question is not challenged, he says twice "Yes" have it.

ಈಗ ಪ್ರಸ್ತಾವದ ಪರವಾಗಿರುವವರು ಹೌದು ಎಂದೂ ಸೂಚಿಸಬೇಕು, ವಿರೋಧವಾಗಿರುವವರು ಇಲ್ಲವೆಂದು ಸೂಚಿಸಬೇಕು. ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆಂದು ಹೇಳಿದಾಗ, ನೀವು ಡಿವಿಜನ್‌ಗೆ ಪ್ರೆಸ್ ಮಾಡಬೇಕು. ಇನ್ನೂ ಭಾವಿಸುತ್ತೇನೆ, ಕನ್‌ಕ್ಲೂಸಿವ್ ಆಗಿ ಸ್ಪೀಕರ್ ಹೇಳುವುದಿಲ್ಲ, ಅನಂತರ ನಿಮ್ಮಿಂದ ಇಲ್ಲವೆಂದು ಸದ್ದು ಬರಲಿಲ್ಲವೆಂದರೆ ನಾನು ಹೇಳುತ್ತೇನೆ, ಪ್ರಸ್ತಾವ ಹೌದು ಎನ್ನುವವರ ಪರವಾಗಿದೆ, ಹೌದು ಎನ್ನುವವರ ಪರವಾಗಿದೆ, ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ ಎಂದು, ಈಗ ಎಲ್ಲಿಗೆ ನಿಲ್ಲಿಸಲಾಗಿತ್ತು?

ಶ್ರೀ ಬಿ.ಹೆಚ್. ಬನ್ನಿಕೋಡು: ಇದರ ಪರವಾಗಿರುವವರು ಹೌದು ಎಂದು ಹೇಳಬೇಕು ಎಂದು ಅಧ್ಯಕ್ಷರು ಕೇಳಿದಾಗ ನಾವು ಹೌದು ಎಂದು ಹೇಳಿದೆವು. ಮುಂದೆ ಇಲ್ಲ ಎನ್ನುವವರು ಇಲ್ಲವೆಂದು ಹೇಳಿದ್ದು ಕೇಳಲಿಲ್ಲ. ಆ ಹಂತದಲ್ಲಿ ಏಕಾಂತಯ್ಯನವರು ಡಿವಿಜನ್‌ಗೆ ಪ್ರೆಸ್ ಮಾಡಿದರು. 'ಅಲ್ಲ' ಎನ್ನುವವರು ನಮ್ಮ ಬೇಡಿಕೆಯನ್ನು ಕೇಳಲಿಲ್ಲ, ಇದು ಇಲ್ಲಿ ನಡೆದಿದ್ದು.

ಶ್ರೀ ಹೆಚ್. ಏಕಾಂತಯ್ಯ: ಮೊದಲನೆಯ ಸಾರಿ ಅಧ್ಯಕ್ಷರು ಭಾವಿಸುತ್ತೇನೆಂದು ಹೇಳಿದ ತಕ್ಷಣ I pressed for the divison . ಎಂಬ ಮಾತನ್ನು ಹೇಳಿದೆ. ಅದು ಅವರ ಗಮನಕ್ಕೆ ಬಂತೋ ಇಲ್ಲವೋ ಗೊತ್ತಿಲ್ಲ, But I don't think any mala-fide intention on the part of the Chair also. That is not my intention also.

ಅವರು ಮೊದಲನೆಯ ಸಾರಿ ಏನು ಅವರು ಭಾವಿಸುತ್ತೇನೆಂದು ಹೇಳಿದರು, ಆ ಮಾತನ್ನು ಎರಡನೆಯ ಸಾರಿ ಹೇಳುವುದಕ್ಕೆ ಮುಂಚೆ I press for division ಎಂದು ಹೇಳಿದೆ. ಅದು ಅಧ್ಯಕ್ಷರಿಗೆ ಅಥವಾ ಬೇರೆಯವರಿಗೆ ಕೇಳಿತೋ ಇಲ್ಲವೋ ಗೊತ್ತಿಲ್ಲ. ಅದು ರೆಕಾರ್ಡಿಗೆ ಹೋಗಿದೆ. ಅದನ್ನು ಕೇಳಿದೆ ಯಾವುದೋ ತೀರ್ಮಾನಕ್ಕೆ ಬಂದರೆ, I don't want to press all these things ಇದು ಬಹಳ ಪರಿಣಾಮ

ಕಾರಿಯಾದ ಬದಲಾವಣೆ ಅಥವಾ ವ್ಯತ್ಯಾಸ ಏನು ಆಗುವುದಿಲ್ಲವೆಂದು ನನಗೆ ಗೊತ್ತಿದೆ. ನಾನು ಹೇಳಿದಂಥ ಮಾತು. ಆ ಒಂದು ಸಂದರ್ಭದಲ್ಲಿ ಹೇಗಿತ್ತು ಎಂದರೆ, ಅರ್ಥಾತ್ ಸಂಖ್ಯಾ ಬಲ್ಲ ಏನಿತ್ತು ಎಂಬುದು ತಾವು ಆ ಸಮಯದಲ್ಲಿ ಇದ್ದಿದ್ದರೆ ಅರ್ಥವಾಗುತ್ತಿತ್ತು. ಅವರು ನಮಗಿಂತ ಜಾಸ್ತಿ ಇದ್ದಾರೆಂಬುದರಲ್ಲೇನು ಅನುಮಾನವಿಲ್ಲ. I took a chance to press for division at the appropriate time.

ಈ ಎಲ್ಲಾ ವಿಷಯದಲ್ಲಿ I leave it to the Chair. At the end of the first reading itself I pressed for division. It is on record.

ತಾವು ಅವಶ್ಯಕತೆ ಇದೆ ಎಂದು ಭಾವಿಸಿದರೆ, ರೆಕಾರ್ಡನ್ನು ತರಿಸಿ ನೋಡಿ ತಮ್ಮ ತೀರ್ಮಾನವನ್ನು ಹೇಳಬಹುದು. However, I will abide by your decision.

ಅಧ್ಯಕ್ಷರು: ಒಂದು ಸಮಾಧಾನ ತಂದಿರತಕ್ಕದ್ದು ಏನೆಂದರೆ, ಗೌರವಾನ್ವಿತ ಸದಸ್ಯರಾದಂಥ ಶ್ರೀ ಇದಿನಬ್ಬರವರು ಇಲ್ಲಿ ಕುಳಿತಿದ್ದಾಗ ಅವರ ವಿಚಾರದಲ್ಲಿ ಯಾವುದೇ..

ಶ್ರೀ ಬಿ.ಹೆಚ್. ಬನ್ನಿಕೋಡು: ಅವರ ಬಗ್ಗೆ ವೈಯಕ್ತಿಕವಾಗಿ ಏನು ಇಲ್ಲ. ಪ್ರೊಸೀಜರಲ್ ವಿಷಯ ಅಷ್ಟೆ.

ಅಧ್ಯಕ್ಷರು: ನನಗೆ 15 ತಿಂಗಳು ಟ್ರೈನಿಂಗ್ ಆದಮೇಲೂ ಪ್ರಸ್ತಾವವನ್ನು ಒಟ್ಟಿಗೆ ಹಾಕತಕ್ಕ ಕಾಲದಲ್ಲಿ ನನಗೆ ಸ್ವಲ್ಪ ಗಡಿಬಿಡಿ ಆಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ: ಆ ಗಡಿಬಿಡಿ, ದ್ವಂದ್ವ ನಮ್ಮೆಲ್ಲರಲ್ಲೂ ಇದೆ. I will leave it to you at this stage.

MR. SPEAKER: So, no motives are imputed and there is no reason for them. We know the ground realities of the situation. Now have a look around....

SRI. R. V. DESHAPANDE: Now they are safe.

ಶ್ರೀ ಬಿ. ಹೆಚ್. ಬನ್ನಿಕೋಡು: ಈಗ ಎಲ್ಲರೂ ಬಂದಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ: 1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು, ನ್ಯಾಯ ಪಂಚಾಯತಿಗಳು-ತಿದ್ದುಪಡಿ ವಿಧೇಯಕವನ್ನು ಈ ಸಭೆಯು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು, ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು...

MR. SPEAKER: In between the division, you cannot make a submission. Let this be over.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಆರ್. ಎಲ್. ಜಾಲಪ್ಪ: ಅಧ್ಯಕ್ಷರೇ, ಈ ಹಂತದಲ್ಲಿ ಒಂದು ಮಾತು ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಸರ್ಕಾರಕ್ಕೆ ನಾವು ಬಹಳ ಸಾರಿ ಬುದ್ದಿವಾದ

ಕಾರಿಯಾದ ಬದಲಾವಣೆ ಅಥವಾ ವ್ಯತ್ಯಾಸ ಏನು ಆಗುವುದಿಲ್ಲವೆಂದು ನನಗೆ ಗೊತ್ತಿದೆ. ನಾನು ಹೇಳಿದಂಥ ಮಾತು. ಆ ಒಂದು ಸಂದರ್ಭದಲ್ಲಿ ಹೇಗಿತ್ತು ಎಂದರೆ, ಅರ್ಥಾತ್ ಸಂಖ್ಯಾ ಬಲ್ಲ ಏನಿತ್ತು ಎಂಬುದು ತಾವು ಆ ಸಮಯದಲ್ಲಿ ಇದ್ದಿದ್ದರೆ ಅರ್ಥವಾಗುತ್ತಿತ್ತು. ಅವರು ನಮಗಿಂತ ಜಾಸ್ತಿ ಇದ್ದಾರೆಂಬುದರಲ್ಲೇನು ಅನುಮಾನವಿಲ್ಲ. I took a chance to press for division at the appropriate time.

ಈ ಎಲ್ಲಾ ವಿಷಯದಲ್ಲಿ I leave it to the Chair. At the end of the first reading itself I pressed for division. It is on record.

ತಾವು ಅವಶ್ಯಕತೆ ಇದೆ ಎಂದು ಭಾವಿಸಿದರೆ, ರೆಕಾರ್ಡನ್ನು ತರಿಸಿ ನೋಡಿ ತಮ್ಮ ತೀರ್ಮಾನವನ್ನು ಹೇಳಬಹುದು. However, I will abide by your decision.

ಅಧ್ಯಕ್ಷರು: ಒಂದು ಸಮಾಧಾನ ತಂದಿರತಕ್ಕದ್ದು ಏನೆಂದರೆ, ಗೌರವಾನ್ವಿತ ಸದಸ್ಯರಾದಂಥ ಶ್ರೀ ಇದಿನಬ್ಬರವರು ಇಲ್ಲಿ ಕುಳಿತಿದ್ದಾಗ ಅವರ ವಿಚಾರದಲ್ಲಿ ಯಾವುದೇ..

ಶ್ರೀ ಬಿ.ಹೆಚ್. ಬನ್ನಿಕೋಡು: ಅವರ ಬಗ್ಗೆ ವೈಯಕ್ತಿಕವಾಗಿ ಏನು ಇಲ್ಲ. ಪ್ರೊಸೀಜರಲ್ ವಿಷಯ ಅಷ್ಟೆ.

ಅಧ್ಯಕ್ಷರು: ನನಗೆ 15 ತಿಂಗಳು ಟ್ರೈನಿಂಗ್ ಆದಮೇಲೂ ಪ್ರಸ್ತಾವವನ್ನು ಒಟ್ಟಿಗೆ ಹಾಕತಕ್ಕ ಕಾಲದಲ್ಲಿ ನನಗೆ ಸ್ವಲ್ಪ ಗಡಿಬಿಡಿ ಆಗುತ್ತದೆ.

ಶ್ರೀ ಹೆಚ್. ಏಕಾಂತಯ್ಯ: ಆ ಗಡಿಬಿಡಿ, ದ್ವಂದ್ವ ನಮ್ಮೆಲ್ಲರಲ್ಲೂ ಇದೆ. I will leave it to you at this stage.

MR. SPEAKER: So, no motives are imputed and there is no reason for them. We know the ground realities of the situation. Now have a look around....

SRI. R. V. DESHAPANDE: Now they are safe.

ಶ್ರೀ ಬಿ. ಹೆಚ್. ಬನ್ನಿಕೋಡು: ಈಗ ಎಲ್ಲರೂ ಬಂದಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ: 1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತಿ ಸಮಿತಿಗಳು, ಮಂಡಲ ಪಂಚಾಯತಿಗಳು, ನ್ಯಾಯ ಪಂಚಾಯತಿಗಳು-ತಿದ್ದುಪಡಿ ವಿಧೇಯಕವನ್ನು ಈ ಸಭೆಯು ಅನುಮೋದಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ 1991ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು, ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು...

MR. SPEAKER: In between the division, you cannot make a submission. Let this be over.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಶ್ರೀ ಆರ್. ಎಲ್. ಜಾಲಪ್ಪ: ಅಧ್ಯಕ್ಷರೇ, ಈ ಹಂತದಲ್ಲಿ ಒಂದು ಮಾತು ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಸರ್ಕಾರಕ್ಕೆ ನಾವು ಬಹಳ ಸಾರಿ ಬುದ್ಧಿವಾದ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: 1991 ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು, ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು: ಈಗ 1991-92ನೇ ಸಾಲಿನ ಈಗ ಅಯವ್ಯಯದ ಮೇಲಿನ ಚರ್ಚೆ ಯಾರು ಮಾತನಾಡುತ್ತಿದ್ದರು? Who held the floor? I think Mr. Chandre Gowda was on his legs.

ಸದನವನ್ನು ಅರ್ಧ ಗಂಟೆ ಮುಂದಕ್ಕೆ ಹಾಕೋಣ. ಸದನದ ಕಾರ್ಯಕಲಾಪ ಸಲಹಾ ಸಮಿತಿ ಸಭೆ ಇದೆ. ಆದುದರಿಂದ ಈಗ ಸಭೆ ಮುಂದುವರೆದು ಮತ್ತೆ 5 ಗಂಟೆಗೆ ಮತ್ತೆ ಸಮಾವೇಶವಾಗುತ್ತದೆ.

(4 ಗಂಟೆ 36ನೇ ನಿಮಿಷದಲ್ಲಿ ಸಭೆಯನ್ನು 5 ಗಂಟೆಯವರೆಗೆ ಮುಂದೂಡಲಾಯಿತು.)

ಸದನವು ಪುನಃ 5-05 ಗಂಟೆಗೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ. ಆರ್.ವಿ. ದೇಶಪಾಂಡೆ: ಮಾನ್ಯ ಸಭಾಧ್ಯಕ್ಷರೇ, ಇವತ್ತು ಪತ್ರಿಕೆಗಳಲ್ಲಿ ಒಂದು ಸುದ್ದಿ ಬಂದಿದೆ. ಏನೆಂದರೆ ಮಾನ್ನೆ ಸಿ.ಎಲ್.ಪಿ. ಮಿಟಿಂಗ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ಹೌಸನ್ನು ಡಿಸಾಲ್ವ್ ಆಗುವುದಿಲ್ಲವೆಂದು ಹೇಳಿದ್ದಾರೆ. ಆದರೆ ಈ ಹೌಸ್‌ನಲ್ಲಿ ಅ ಜಾಗದಲ್ಲಿ ಒಂದು ರೂಮರ್ ಇದೆ. ಕಾಂಗ್ರೆಸ್ಸ್ ಪಕ್ಷದ ಮುಖಂಡರಾದ ಶ್ರೀಮಾನ್ ರಾಜೀವ್‌ಗಾಂಧಿಯವರು ಅ ಪಕ್ಷದ ಅಧ್ಯಕ್ಷರು ಮುಖ್ಯ ಮಂತ್ರಿಗಳಿಗೆ ಫೋನ್ ಮಾಡಿ ಹೌಸನ್ನು ಡಿಸಾಲ್ವ್ ಮಾಡಲು ಶಿಫಾರಸ್ಸು ಮಾಡಿ ಎಂದು ತಿಳಿಸಿದ್ದಾರೆನ್ನುವ ಒಂದು ವದಂತಿ ಎಲ್ಲಾ ಕಡೆ ಹರಡಿದೆ. ಈ ಮನೆಯಲ್ಲಿ ಇದೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟರೆ ಒಳ್ಳೆಯದೆಂದು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡ್ರೇ, ತಾವು ಅವರಿಗೆ ಉತ್ತರಕೊಡಿ.

SRI R.V. DESHPANDE: What the silence means?

MR. SPEAKER: It means so many things.

SRI R. V. DESHPANDE: We will be happy. We are demanding dissolution.

MR. SPEAKER: Right now Bangalore is full of rumours. To that chain you add one more.

ವಿತ್ತೀಯ ಕಾರ್ಯ ಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

+ ಶ್ರೀ ಡಿ.ಬಿ. ಚಂದ್ರೇಗೌಡ: (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೇ ನಾನು ನಿನ್ನೆಯ ದಿವಸ ಆಯವ್ಯಯದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುತ್ತಾ ಒಂದೆರಡು ವಿಚಾರಗಳನ್ನು ಹೇಳಿ ಅಷ್ಟಕ್ಕೆ ಸೀಮಿತಗೊಳಿಸಿದ್ದೆ. ಈಗ ನಮ್ಮ ಮುಂದೆ ಲೇಖಾನುದಾನವೂ ಇದೆ ಪೂರ್ಣ ಪ್ರಮಾಣದ ಅಯವ್ಯಯವೂ ಇದೆ. ರಾಜ್ಯಾಂಗದ 202ನೇ ವಿಧಿಯಲ್ಲಿ ಅನ್ಯುಯಲ್ ಫೈನಾನ್ಸ್ ಸ್ಟೇಟ್‌ಮೆಂಟ್‌ನ ಪ್ರೊಸಿಜರ್‌ನ್ನು ಲೇಡೌನ್‌ಮಾಡುತ್ತಾರೆ.